ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫೬

# ಪಟ್ಟಿ – ೨೬

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತಮೂರನೇ ಅಧಿವೇಶನ
(ಮುಂದುವರೆದ ಉಪವೇಶನ)

ಬುಧವಾರ, ದಿನಾಂಕ : ೧೫ನೇ ನವೆಂಬರ್, ೨೦೧೭

---

## ಸಮೂಹ – III

೧. ಕಂದಾಯ ಸಚಿವರು.

೨. ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು.

೩. ಅರಣ್ಯ ಸಚಿವರು.

೪. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.

೫. ಕಾರ್ಮಿಕ ಸಚಿವರು.

೬. ವಸತಿ ಸಚಿವರು.

೭. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು.

---

## ಹೊಸದಾಗಿ ಘೋಷಣೆ ಮಾಡಿರುವ ತಾಲ್ಲೂಕುಗಳಲ್ಲಿ ಹುದ್ದೆಗಳ ಸೃಜನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೩೧೮೮ (೩೭೭೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇತ್ತೀಚೆಗೆ ಸರ್ಕಾರವು ಹೊಸದಾಗಿ ಘೋಷಣೆ ಮಾಡಿದ ತಾಲ್ಲೂಕುಗಳು ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಹೊಸದಾಗಿ ಘೋಷಣೆ ಮಾಡಲಾದ ತಾಲ್ಲೂಕುಗಳು ಆಡಳಿತಾತ್ಮಕವಾಗಿ ಕಾರ್ಯರೂಪಕ್ಕೆ ತರುವುದು ಯಾವಾಗ ; (ಮಾಹಿತಿ ನೀಡುವುದು)

(ಇ) ಸದರಿ ಘೋಷಣೆ ಮಾಡಲಾದ ಹೊಸ ತಾಲ್ಲೂಕುಗಳ ಎಲ್ಲಾ ಇಲಾಖೆಗಳಲ್ಲಿ ಹೊಸದಾಗಿ ಹುದ್ದೆಗಳನ್ನು ಸೃಜಿಸಲಾಗುವುದೇ ಅಥವಾ ನಿಯೋಜನೆ ಮೇರೆಗೆ ಅಧಿಕಾರಿ/ ಸಿಬ್ಬಂದಿಗಳಿಂದ ಆಡಳಿತ ನಡೆಸಲಾಗುವುದೆ ; (ಮಾಹಿತಿ ನೀಡುವುದು)

(ಈ) ಈಗಾಗಲೇ ಬಹಳಷ್ಟು ಕಡೆಗಳಲ್ಲಿ ತಾಲ್ಲೂಕುಗಳ ಘೋಷಣೆ ಮಾಡುವಂತೆ ಪ್ರತಿಭಟನೆ ಮಾಡಲಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ ; ಇದ್ದರೆ, ಈ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮವೇನು ? (ಮಾಹಿತಿ ನೀಡುವುದು)

## ಕೇಂದ್ರ ಸರ್ಕಾರದ ಎ.ಐ.ಬಿ.ಪಿ (A.I.B.P) ಯೋಜನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೩೧೮೯(೩೭೮೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದ ಎ.ಐ.ಬಿ.ಪಿ (A.I.B.P) ಯೋಜನೆಯಡಿಯಲ್ಲಿ ಹೈದ್ರಾಬಾದ್–ಕರ್ನಾಟಕ ಭಾಗದ ಜಿಲ್ಲೆಗಳಿಗೆ ಅನುಷ್ಠಾನಗೊಳಿಸಲಾಗಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಜಿಲ್ಲೆಗಳಿಗೆ ಎ.ಐ.ಬಿ.ಪಿ (A.I.B.P) ಯೋಜನೆಯಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ವೆಚ್ಚ ಮಾಡಿರುವ ಅನುದಾನ ಹಾಗೂ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನದ ಮೊತ್ತವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ಯೋಜನೆಯಡಿ ಎಷ್ಟು ಯೋಜನೆಗಳು ಪೂರ್ಣಗೊಂಡಿವೆ ಹಾಗೂ ಎಷ್ಟು ಯೋಜನೆಗಳು ಪ್ರಗತಿಯಲ್ಲಿವೆ ಮತ್ತು ನಿಗಧಿತ ಅವಧಿಯು ಮುಕ್ತಾಯಗೊಂಡಿದ್ದರೂ ಸಹ ಅಪೂರ್ಣಗೊಂಡಿರುವ ಯೋಜನೆಗಳಾವುವು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಪ್ರದೇಶದ ಕ್ರೀಡಾಪಟುಗಳಿಗಾಗಿ ಖರೀದಿಸಲಾದ ಕ್ರೀಡಾ ಸಾಮಗ್ರಿಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೩೧೯೦(೩೭೮೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕಳೆದ ೨೦೧೩ ರಿಂದ ೨೦೧೭ ರವರೆಗೆ ಕ್ರೀಡಾಪಟುಗಳಿಗಾಗಿ ಖರೀದಿಸಲಾದ ಸಾಮಗ್ರಿಗಳು ಯಾವುವು; (ಸಾಮಗ್ರಿವಾರು ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಸಾಮಗ್ರಿಗಳ ಖರೀದಿಗಾಗಿ ಟೆಂಡರ್ ಕರೆಯಲಾಗಿದೆಯೇ; (ಇದ್ದರೆ, ಟೆಂಡರ್ ಅಧಿಸೂಚನೆ ದಿನಾಂಕ ಹಾಗೂ ಟೆಂಡರ್ ನಲ್ಲಿ ಭಾಗವಹಿಸಿದ ಫಾರಂಗಳ ಸಂಪೂರ್ಣ ಮಾಹಿತಿ ನೀಡುವುದು)

(ಇ) ಸಾಮಗ್ರಿಗಳ ಖರೀದಿಗಾಗಿ ತಗುಲಿದ ವೆಚ್ಚ ಎಷ್ಟು ಮತ್ತು ಯಾವ ಸಂಸ್ಥೆಯಿಂದ ಖರೀದಿಸಲಾಗಿದೆ; (ಮಾಹಿತಿ ನೀಡುವುದು)

(ಈ) ಸದರಿ ಖರೀದಿಸಲಾದ ಸಾಮಗ್ರಿಗಳು ಇಲ್ಲಿಯವರೆಗೆ ಬಳಕೆಯಾಗದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಳಕೆ ಮಾಡದೆ ಇರುವುದಕ್ಕೆ ಕಾರಣವೇನು ; (ಮಾಹಿತಿ ನೀಡುವುದು)

(ಉ) ಸದರಿ ಕ್ರೀಡಾಪಟುಗಳಿಗೆ ತರಬೇತುದಾರರನ್ನು ನೇಮಕ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ತರಬೇತುದಾರರನ್ನು ನೇಮಕ ಮಾಡಲಾಗುವುದು ? (ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಪ್ರದೇಶದ ಈಶಾನ್ಯ ಪದವೀಧರರ ಕ್ಷೇತ್ರದಲ್ಲಿನ ಕ್ರೀಡಾಂಗಣಗಳ ಬಗ್ಗೆ.

### ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–

೩೯೭ (೩೭೮೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಈಶಾನ್ಯ ಪಧವೀಧರ ಕ್ಷೇತ್ರದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ಹರಪ್ಪನಹಳ್ಳಿಯಲ್ಲಿ ಇರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈಶಾನ್ಯ ಪದವೀಧರ ಕ್ಷೇತ್ರದ ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಿಸಲಾಗಿದೆಯೇ ; ಇದ್ದಲ್ಲಿ, ಎಷ್ಟು ತಾಲ್ಲೂಕು ಕ್ರೀಡಾಂಗಣಗಳು ನಿರ್ಮಿಸಲಾಗಿದೆ; ಸ್ಥಾಪನೆಯಾಗದೇ ಇರುವ ತಾಲ್ಲೂಕುಗಳು ಎಷ್ಟು; ತಾಲ್ಲೂಕು ಮಟ್ಟದ ಕ್ರೀಡಾಂಗಣ ಸ್ಥಾಪನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಮೇಲ್ಕಂಡ ಕ್ಷೇತ್ರದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ಹರಪ್ಪನಹಳ್ಳಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಕೀಡಾಂಗಣಗಳಲ್ಲಿ ನಿರ್ವಹಣೆ ಹಾಗೂ ದುರಸ್ಥಿ ಹಾಗೂ ಮೂಲಭೂತ ಸೌಕರ್ಯವಿಲ್ಲದೆ ಇರುವ ಕ್ರೀಡಾಂಗಣಗಳೆಷ್ಟು; ಈ ನಿಟ್ಟಿನಲ್ಲಿ ಸರ್ಕಾರ ದುರಸ್ಥಿ ಮಾಡಲು ಕೈಗೊಂಡಿರುವ ಕ್ರಮಗಳೇನು ? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)

## ರಾಜ್ಯದ ಅನುದಾನಿತ ಐ.ಟಿ.ಐ ಗಳ ನಿಯಮಗಳ ಬಗ್ಗೆ

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):–**

೩೯೩ (೩೭೧೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅನುದಾನಿತ ಐಟಿಐಗಳಿಗೆ ೧೯೮೩ರ ಶಿಕ್ಷಣ ಇಲಾಖೆ ನಿಯಮಗಳು, ಅಧಿಸೂಚನೆಗಳು ಹಾಗೂ ಆದೇಶಗಳು ಅನ್ವಯವಾಗುತ್ತಿವೆಯೇ , ಇಲ್ಲದಿದ್ದಲ್ಲಿ ಬೇರೆ ಯಾವ ನಿಯಮಗಳು ಅನ್ವಯವಾಗುತ್ತವೆ ;

(ಆ) ರಾಜ್ಯದ ಅನುದಾನಿತ ಐಟಿಐ ಸಿಬ್ಬಂದಿಗಳಿಗೆ ಕೆ.ಸಿ.ಎಸ್.ಆರ್ ನಿಯಮಗಳು ಅನ್ವಯವಾಗುತ್ತವೆಯೇ; ಇಲ್ಲದಿದ್ದಲ್ಲಿ, ಬೇರೆ ಯಾವ ನಿಯಮಗಳು ಅನ್ವಯವಾಗುತ್ತವೇ;

(ಇ) ರಾಜ್ಯದ ಅನುದಾನಿತ ಐಟಿಐ ಸಂಸ್ಥೆಗೆ ಪರಿಷ್ಕೃತ ಅನುದಾನ ಸಂಹಿತೆ ರಚಿಸಲಾಗಿದೆಯೇ ; ರಚಿಸಿದ್ದಲ್ಲಿ, ಸರ್ಕಾರ ಸಲ್ಲಿಸಲಾಗಿದೆಯೇ ; (ಅದರ ಪ್ರತಿಯನ್ನು ಒದಗಿಸುವುದು)

(ಈ) ರಾಜ್ಯದ ಅನುದಾನಿತ ಐಟಿಐಗಳ ಸಿಬ್ಬಂದಿಗಳಿಗೆ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ನೀಡಿರುವಂತೆ ಯಾವ ಯಾವ ರಜಾ ಸೌಲಭ್ಯಗಳನ್ನು ನೀಡಲಾಗಿದೆ ;

(ಉ) ರಜೆಯ ಸೌಲಭ್ಯ ನೀಡಿಲ್ಲವಾಗಿದ್ದಲ್ಲಿ ಅದಕ್ಕೆ ಕಾರಣ ಏನು ?

## ಮಂಡ್ಯ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಡಿಯಲ್ಲಿ ಆಗಿರುವ ಕಾಮಗಾರಿಗಳ ಬಗ್ಗೆ

**ಶ್ರೀ ಎನ್ ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೯೪ (೩೭೩೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ೪ ವರ್ಷಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ವತಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು ; (ತಾಲ್ಲೂಕುವಾರು, ಪಂಚಾಯಿತಿವಾರು ಮಾಹಿತಿ ನೀಡುವುದು)

(ಆ) ಸದರಿ ಕಾಮಗಾರಿಗಳಿಗೆ ಸರ್ಕಾರ ಒದಗಿಸಿರುವ ಅನುದಾನ ಎಷ್ಟು; ಇವುಗಳಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; ಬಾಕಿ ಇರುವ ಕಾಮಗಾರಿಗಳು ಎಷ್ಟು ; ಬಾಕಿ ಇರುವ ಕಾಮಗಾರಿಗಳು ಪೂರ್ಣಗೊಳ್ಳುವುದು ಯಾವಾಗ ;

(ಇ) ಸದರಿ ಕಾಮಗಾರಿಗಳನ್ನು ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; ಈ ಕಾಮಗಾರಿಗಳನ್ನು ಪಡೆಯಲು ಗುತ್ತಿಗೆದಾರರಿಗೆ ಇರಬೇಕಾದ ಮಾನದಂಡಗಳೇನು ? (ಗುತ್ತಿಗೆದಾರರ ಪೂರ್ಣ ಮಾಹಿತಿ ನೀಡುವುದು)

## ವಸತಿ ರಹಿತರನ್ನು ಗುರುತಿಸುವ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೫ (೩೭೩೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೪ ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಮಂದಿ ವಸತಿ ರಹಿತರಿಗೆ ವಸತಿ ಭಾಗ್ಯ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ೨೦೧೬–೧೭ ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಮಂದಿ ವಸತಿ ರಹಿತರನ್ನು ಗುರುತಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿ ಇನ್ನೂ ಗುಡಿಸಿಲಿನಲ್ಲಿ ವಾಸ ಮಾಡುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು ; ಎಷ್ಟು ಕುಟುಂಬಗಳಿಗೆ ಮನೆಯನ್ನು ನಿರ್ಮಿಸಿಕೊಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ವಸತಿ ರಹಿತ ಕುಟುಂಬಗಳಿಗೆ ಮನೆ ನಿರ್ಮಿಸಿಕೊಡಲು ಸರ್ಕಾರಕ್ಕಿರುವ ತೊಂದರೆಗಳೇನು ; ಈ ವಸತಿ ರಹಿತ ಕುಟುಂಬಗಳಿಗೆ ಮನೆ ಭಾಗ್ಯ ಯಾವಾಗ ಒದಗಲಿದೆ ? (ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು)

## ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೯೯೬ (೩೭೩೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರ ಸಂಖ್ಯೆ ಎಷ್ಟು ; ಇವರಲ್ಲಿ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿರುವವರ ಸಂಖ್ಯೆ ಎಷ್ಟು ;

(ಆ) ಸದರಿ ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರಲ್ಲಿ ರಾಜ್ಯದವರಿಗೆ ನೀಡುತ್ತಿರುವ ಸವಲತ್ತುಗಳೇನು ;

(ಇ) ಇವರ ಸದಸ್ಯತ್ವವು ಅವರಿಗೆ ಖಾಯಂ ಆಗಿರುತ್ತದೆಯೇ ; ಅಥವಾ ಪ್ರತಿ ವರ್ಷ ನವೀಕರಣಗೊಳಿಸಬೇಕೆ ;

(ಈ) ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸದರಿ ಕಾರ್ಮಿಕರಿಗೆ ನಗದುರಹಿತ ವಿಮೆ ಸೌಲಭ್ಯ ಇರುವುದೇ ; ಹಾಗಿದ್ದಲ್ಲಿ, ಈ ಸೌಲಭ್ಯ ಯಾವ ರೀತಿ ಉಪಯೋಗವಾಗುತ್ತಿದೆ ;

(ಉ) ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಈ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ ಮತ್ತು ಉಚಿತ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಅವರ ವಿದ್ಯಾಭ್ಯಾಸ ಮುಗಿಯುವವರೆವಿಗೂ ನೀಡಲು ಹಮ್ಮಿಕೊಂಡಿರುವ ಯೋಜನೆಗಳು ಯಾವುವು ;

(ಊ) ಸದರಿ ಕಾರ್ಮಿಕರುಗಳಿಗೆ ಉಚಿತವಾಗಿ ಮಂಡಳಿಯಿಂದ ಮನೆಗಳನ್ನು ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆಯೇ ; ಇದ್ದಲ್ಲಿ ಪೂರ್ಣ ಮಾಹಿತಿ ನೀಡುವುದು?

## ಮಂಡ್ಯ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ಅಡಿಯಲ್ಲಿ ಆಗಿರುವ ಕಾಮಗಾರಿಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೯೯೭ (೩೭೩೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ೪ ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಸರ್ಕಾರ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು ; (ತಾಲ್ಲೂಕುವಾರು, ಪಂಚಾಯತಿವಾರು ಮಾಹಿತಿ ನೀಡುವುದು)

(ಆ) ಸದರಿ ಕಾಮಗಾರಿಗಳಿಗೆ ನೀಡಿರುವ ಅನುದಾನ ಎಷ್ಟು ; ಇವುಗಳಲ್ಲಿ ಪೂರ್ಣಗೊಂಡ ಹಾಗೂ ಬಾಕಿ ಇರುವ ಕಾಮಗಾರಿಗಳ ವಿವರ ಒದಗಿಸುವುದು; ಕಾಮಗಾರಿಗಳು ಬಾಕಿಯಿರುವುದು ಎಷ್ಟು ; ಸದರಿ ಕಾಮಗಾರಿಗಳು ಪೂರ್ಣಗೊಳ್ಳುವುದು ಯಾವಾಗ ;

(ಇ) ಸದರಿ ಕಾಮಗಾರಿಗಳನ್ನು ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ ; ಈ ಕಾಮಗಾರಿಗಳನ್ನು ಪಡೆಯಲು ಗುತ್ತಿಗೆದಾರರಿಗೆ ಇರಬೇಕಾದ ಮಾನದಂಡಗಳೇನು? (ಗುತ್ತಿಗೆದಾರರ ಪೂರ್ಣ ವಿವರ ನೀಡುವುದು)

## ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೯೮ (೩೭೩೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಪ್ರಾರಂಭವಾದಾಗಿನಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು; ಈ ಕಾರ್ಯಕ್ರಮಗಳಿಂದ ಜೀವನೋಪಾಯ ಕಂಡುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕೌಶಲ್ಯ ಅಭಿವೃದ್ಧಿ ಇಲಾಖೆಯಿಂದ ಮಂಡ್ಯ ಜಿಲ್ಲೆಗೆ ಬಿಡುಗಡೆಯಾದ ಅನುದಾನ ಎಷ್ಟು; ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಇದರ ಫಲಾನುಭವಿಗಳು ಯಾರು;

(ಇ) ಉದ್ಯಮಶೀಲತೆಗಾಗಿ ಮಂಡ್ಯ ಜಿಲ್ಲೆಯಲ್ಲಿ ನೀಡಿರುವ ಪ್ರತ್ಯೇಕ ಅವಕಾಶಗಳು ಯಾವುವು; ಇದರಿಂದ ಅನುಕೂಲವಾದ ಫಲಾನುಭವಿಗಳು ಯಾರು? (ತಾಲ್ಲೂಕುವಾರು ವಿವರ ನೀಡುವುದು)

## ಕರ್ನಾಟಕ ಇನಾಂ ರದ್ದಿಯಾತಿ ಕಾಯ್ದೆ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೩೯೯ (೩೭೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಇನಾಂ ರದ್ದಿಯಾತಿ ಕಾಯ್ದೆಯ ಮಾನದಂಡಗಳೇನು ;

(ಆ) ೧೯೭೪ರನ್ವಯ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ತದ್ದೀಕ ಮತ್ತು ವರ್ಷಾಸನ ನಿಗಧಿಪಡಿಸಿ ಪಾವತಿಸಲಾದ ಮೊತ್ತ ಎಷ್ಟು? (ಜಿಲ್ಲಾವಾರು ಹಾಗೂ ವಕ್ಫ್ ಸಂಸ್ಥೆವಾರು ವಿವರ ನೀಡುವುದು)

## ರಾಯಚೂರು ಮಾನ್ವಿ ಪಟ್ಟಣಗಳಿಗೆ ಮಂಜೂರಾತಿಗಿರುವ ಮನೆಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೨೦೦ (೩೬೯೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭–೧೮ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು; ಬಸವ ವಸತಿ ಯೋಜನೆಯಲ್ಲಿ ಮಂಜೂರಾತಿಗಿರುವ ಮನೆಗಳ ಸಂಖ್ಯೆ ಎಷ್ಟು ;

(ಆ) ೨೦೧೭–೧೮ನೇ ಸಾಲಿನಲ್ಲಿ ಮಾನ್ವಿ, ಸಿರವಾರ, ಕವಿತಾಳ ಪಟ್ಟಣ ಪ್ರದೇಶಗಳಲ್ಲಿ ವಿವಿಧ ವಸತಿ ಯೋಜನೆಗಳಡಿ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ;

(ಇ) ೨೦೧೭–೧೮ನೇ ಸಾಲಿನಲ್ಲಿ ರಾಯಚೂರು ನಗರಕ್ಕೆ ವಿವಿಧ ವಸತಿ ಯೋಜನೆಗಳ ಮುಖಾಂತರ ಮಂಜೂರಾತಿಗಿರುವ ಮನೆಗಳ ಸಂಖ್ಯೆ ಎಷ್ಟು ?

## ರಾಯಚೂರು ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಹಾಳಾಗಿರುವ ಬೆಳೆಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೨೦೧ (೩೬೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ಸುರಿದ ಅತಿಹೆಚ್ಚು ಮಳೆಯಿಂದ ಹಾಳಾಗಿರುವ ವಿವಿಧ ಬೆಳೆಗಳಿಗೆ ಬೆಳೆ ನಷ್ಟ ಪರಿಹಾರ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ನಗರದಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಮಾನ್ವಿ ಪಟ್ಟಣದಲ್ಲಿ ಮಿನಿ ವಿಧಾನಸೌಧ ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಏತ ನೀರಾವರಿ ಯೋಜನೆಗಳ ಕಾಮಗಾರಿ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೨೦೨ (೩೬೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ತಾಲ್ಲೂಕಿನ ದದ್ದಲ, ಮಾದಲಪೂರ, ಏತ ನೀರಾವರಿ ಯೋಜನೆಗಳು ಕಾಮಗಾರಿಯುನ್ನು ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಮಾದಲಾಪೂರ ಕೆರೆಯನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿರುವ ಬಾರ್ ಅಸೋಸಿಯೇಷನ್‌ನ ಸದಸ್ಯರ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೨೦೩ (೩೭೦೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ಪಟ್ಟಣದಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ಕೋರ್ಟ್ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ನಗರದಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಬಾರ್–ಅಸೋಸಿಯೋಷನ್‌ನಲ್ಲಿ ಸದಸ್ಯರಾಗಿರುವ ನ್ಯಾಯವಾದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಖಾಸಗಿ ಐ.ಟಿ.ಐಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಕುರಿತು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೩೨೦೪ (೩೭೭೫) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೭ ವರ್ಷ ಮುಗಿಸಿದ ಖಾಸಗಿ ಐ.ಟಿ.ಐಗಳು ಎಷ್ಟು; ಅವುಗಳನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ;

(ಆ) ೭ ವರ್ಷ ಮುಗಿಸಿದ ಖಾಸಗಿ ಸಂಸ್ಥೆಗಳ ಹೆಸರು, ಪ್ರಾರಂಭಿಸಿದ ದಿನಾಂಕ: ಸಂಪೂರ್ಣವಾದ ಮಾಹಿತಿಯನ್ನು ಒದಗಿಸುವುದು ;

(ಇ) ೨೦೧೦ರಲ್ಲಿ ಜಾರಿಯಾದ ಕೇಂದ್ರಿಕೃತ ಅನುದಾನವನ್ನು ರದ್ದುಪಡಿಸಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ, ಸಿಬ್ಬಂದಿ ಆಧಾರಿತ ವೇತನಾನುದಾನವನ್ನು ಜಾರಿಗೊಳಿಸದಿರಲು ಕಾರಣವೇನು ;

(ಈ) ತಕ್ಷಣ ೨೦೧೦ರ ಪೂರ್ವದಲ್ಲಿನ ನಿಯಮವನ್ನು ಜಾರಿಗೊಳಿಸಿ ಅನುದಾನಕ್ಕೆ ಒಳಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

## ಶಿಗ್ಗಾಂವ ತಾಲ್ಲೂಕು ಗೋಟಗೋಡಿ ಊರಿನ ಮುಂದಿನ ಕೆರೆ ನವೀಕರಣ ಕಾಮಗಾರಿಯಲ್ಲಿನ ಅವ್ಯವಹಾರದ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೩೨೦೫ (೩೭೭೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿಗ್ಗಾಂವ ತಾಲ್ಲೂಕು ಗೋಟಗೋಡಿ ಊರಿನ ಮುಂದಿನ ಕೆರೆ (ರಾಕ್ ಗಾರ್ಡನ್ ಹತ್ತಿರ) ನವೀಕರಣ ಕಾಮಗಾರಿಗೆ ಇಲಾಖೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತ ಎಷ್ಟು;

(ಆ) ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿದ್ದ ಗುತ್ತಿಗೆದಾರರ ಸಂಖ್ಯೆ ಎಷ್ಟು; ಅವರು ಟೆಂಡರ್ ಹಾಕಿದ ಮೊತ್ತವೆಷ್ಟು;

(ಇ) ಟೆಂಡರ್ ಪಡೆದ ಗುತ್ತಿಗೆದಾರರ ಹೆಸರೇನು; ಎಷ್ಟು ಮೊತ್ತಕ್ಕೆ ಟೆಂಡರ್ ಆಗಿದೆ ;

(ಈ) ಟೆಂಡರ್ ಮೊತ್ತಕ್ಕೆ ಹಾಗೂ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತಕ್ಕೆ ವ್ಯತ್ಯಾಸವಿರಲು ಕಾರಣಗಳೇನು ;

(ಉ) ಕಾಮಗಾರಿಯನ್ನು ಅನುಷ್ಠಾನಗೊಳಿಸದೆ ಅಧಿಕಾರಗಳು ಹಾಗೂ ಗುತ್ತಿಗೆದಾರರು ಶಾಮೀಲಾಗಿ ಬೋಗಸ್ ಬಿಲ್ ತಯಾರಿಸಿದ್ದಾರೆಂದು ಸರ್ಕಾರಕ್ಕೆ ದೂರುಗಳು ಬಂದಿವೆಯೇ ;

(ಊ) ಬಂದಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ತನಿಖೆ ನಡೆಸಿ ಕ್ರಮಕೈಗೊಳ್ಳದಿರಲು ಕಾರಣಗಳೇನು ?

**ಕಾಳಿ ಕಣಿವೆ ಪ್ರದೇಶದ ವ್ಯಾಪ್ತಿಯನ್ನು ಕಡಿಮೆಗೊಳಿಸುತ್ತಿರುವ ಬಗ್ಗೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೩೨೦೬ (೩೭೭೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸೂಕ್ಷ್ಮ ಜೀವವೈವಿಧ್ಯವನ್ನು ಹೊಂದಿರುವ ಕಾಳಿ ಕಣಿವೆ ಪ್ರದೇಶದ ಸಂರಕ್ಷಿತ ಪ್ರದೇಶವನ್ನು ಕಡಿಮೆಗೊಳಿಸಲು ಸಚಿವ ಸಂಪುಟದ ಉಪಸಮಿತಿಯು ನಿರ್ಣಯ ಕೈಗೊಂಡಿದೆಯೇ ;

(ಆ) ಈ ಪ್ರದೇಶದ ವ್ಯಾಪ್ತಿಯನ್ನು ೧೨೦೨ ಚದರ ಕಿಲೋಮೀಟರ್‌ಗಳಿಂದ ೩೧೨ ಚದರ ಕಿಲೋಮೀಟರ್‌ಗಳಿಗೆ ಕಡಿಮೆಗೊಳಿಸಿ ಭಾರತ ಸರ್ಕಾರಕ್ಕೆ ಯಾವ ದಿನಾಂಕದಂದು ಶಿಫಾರಸ್ಸು ಮಾಡಲಾಗಿದೆ;

(ಇ) ಪಶ್ಚಿಮ ಘಟ್ಟದ ವ್ಯಾಪ್ತಿಯು ಅತ್ಯಂತ ಸೂಕ್ಷ್ಮ ಜೈವಿಕ ವೈವಿದ್ಯ ಸಂಕುಲಗಳ ಪ್ರದೇಶವಾಗಿದ್ದು, ವ್ಯಾಪ್ತಿಯನ್ನು ಕಡಿಮೆಗೊಳಿಸುವುದರಿಂದ ಅಪರೂಪದ ಜೀವವೈವಿದ್ಯದ ನಾಶಕ್ಕೆ ಆಹ್ವಾನ ನೀಡಿದಂತಾಗುವುದಿಲ್ಲವೆ ;

(ಈ) ಪಶ್ಚಿಮ ಘಟ್ಟ ಪ್ರದೇಶ ಹಾಗೂ ಕಾಳಿ ಕಣಿವೆ ಪ್ರದೇಶಗಳು ಅತ್ಯಂತ ಸೂಕ್ಷ್ಮ ಪ್ರದೇಶಗಳಾಗಿದ್ದು, ಇವುಗಳ ಸಂರಕ್ಷಣೆಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ?

**ಎನ್.ಆರ್.ಬಿ. ಸಿ ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೦೭ (೩೫೧೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಎನ್.ಆರ್.ಬಿ.ಸಿ ಯಿಂದ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಕ್ರಮ ಕೈಗೊಳ್ಳಲಾಗುವುದು ಯಾವಾಗ?

## ಮತ್ಸಯ ಯೋಜನೆಯ ಮನೆಗಳ ಬಗ್ಗೆ

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೦೮ (೩೫೧೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ಮತ್ಸಯ ಯೋಜನೆಯಲ್ಲಿ ನೀಡಲಾಗಿದೆ ; (೨೦೧೪–೧೫, ೨೦೧೫–೧೬,೨೦೧೬–೧೭, ೨೦೧೭–೧೮ ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

(ಆ) ನದಿಪಾತ್ರದಲ್ಲಿರುವ ಮೀನುಗಾರರಿಗೆ ಬೋಟ್‌ಗಳನ್ನು (ಯಾಂತ್ರಿಕ ದೋಣಿ) ಮಂಜೂರು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

(ಇ) ಇದ್ದರೆ, ಎಷ್ಟು ಬೋಟ್‌ಗಳನ್ನು ಮಂಜೂರು ಮಾಡಿದ್ದೀರಿ ?

## ನಾರಾಯಣಪುರ ಬಲದಂಡೆ ಕಾಲುವೆ ನವೀಕರಿಸುವ ಬಗ್ಗೆ

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೦೯ (೩೫೧೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಾರಾಯಣಪುರ ಬಲದಂಡೆ ಕಾಲುವೆ ನವೀಕರಿಸುವ ಕಾಮಗಾರಿ ಕೈಕೊಳ್ಳಲಾಗುವುದು ಯಾವಾಗ ;

(ಆ) ಈ ಕಾಮಗಾರಿ ಕೈಕೊಳ್ಳುವಾಗ ಎಲ್ಲಾ distributor ಗಳಿಗೆ ಪ್ರತ್ಯೇಕ ಗೇಟ್ ಅಳವಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು ?

## ಬೆಳೆ ಪರಿಹಾರದಲ್ಲಿ ತಾರತಮ್ಯ ಮಾಡಿರುವ ಬಗ್ಗೆ

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೧೦ (೩೫೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಗ್ರಾಮಗಳಲ್ಲಿ ಬೆಳೆ ಪರಿಹಾರ ತಾರತಮ್ಯ ಆಗಿರುವುದು ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ತೆಗೆದುಕೊಂಡ ಕ್ರಮಗಳೇನು ;

(ಇ) ಪರಿಹಾರಕ್ಕೆ ಅರ್ಹ ಫಲಾನುಭವಿಗಳಿಗೆ ಬೆಳೆ ಪರಿಹಾರ ಯಾವಾಗ ವಿತರಿಸಲಾಗುವುದು ?

## ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿನ ಸಿಬ್ಬಂದಿಗಳ ಬಗ್ಗೆ

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೧೧ (೩೬೭೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಖಾಯಂಯೇತರ

ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಪ್ರಸ್ತುತ ಅವರು ನಿರ್ವಹಿಸುತ್ತಿರುವ ಕರ್ತವ್ಯಗಳೇನು ; (ವೃಂದವಾರು ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಎಷ್ಟು ನಿರುದ್ಯೋಗಿ ವಿದ್ಯಾರ್ಥಿ ಮಿತ್ರರಿಗೆ ತಮ್ಮ ಇಲಾಖೆಯಿಂದ ತರಬೇತಿ ನೀಡಲಾಗಿದೆ ; ತರಬೇತಿ ಪಡೆದುಕೊಂಡವರ ಹೆಸರು, ವಿಳಾಸ, ಮತ್ತು ಯಾವ ವರ್ಗದಲ್ಲಿ ತರಬೇತಿ ಪಡೆದುಕೊಂಡಿರುತ್ತಾರೆ ; ತರಬೇತಿಗೆ ಖರ್ಚಾದ ಮೊತ್ತವೆಷ್ಟು ;

(ಇ) ತರಬೇತಿ ಪಡೆದುಕೊಂಡು ವಿದ್ಯಾರ್ಥಿಗಳು ಸದ್ಯಕ್ಕೆ ಯಾವ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಉಪಜೀವನ ಸಾಗಿಸುತ್ತಿದ್ದಾರೆ ? (ವಿವರ ನೀಡುವುದು)

## ಗ್ರಾಮಗಳ ವ್ಯಾಪ್ತಿ ಹೆಚ್ಚಿಸುವ ಬಗ್ಗೆ

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೧೨ (೩೬೭೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮಗಳ ವ್ಯಾಪ್ತಿ (ಹಳೆಗ್ರಾಮ ನಕ್ಷೆ ವ್ಯಾಪ್ತಿ) ಈಗ ತುಂಬಾ ಬೆಳೆದಿದ್ದು, ಗ್ರಾಮಗಳ ವ್ಯಾಪ್ತಿ ಹೆಚ್ಚಿಸುವ ಬಗ್ಗೆ ಸಾಕಷ್ಟು ಬೇಡಿಕೆ ಇದ್ದು, ಈ ಕುರಿತು ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆಗಳಿವೆಯೇ ; ಈ ನಿಟ್ಟಿನಲ್ಲಿ ಯಾವ ಕ್ರಮಕೈಕೊಳ್ಳಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಸರ್ವೇ ಇಲಾಖೆಯಿಂದ ಸರಿಯಾದ ಸಮಯಕ್ಕೆ ಸರ್ವೆಯಾಗುತ್ತಿಲ್ಲವಾದ್ದರಿಂದ ಫಾರ್ಮ–೯, ಫಾರ್ಮ–೧೧ಎ, ಫಾರ್ಮ–೧೧ಬಿ, ನೀಡುವಲ್ಲಿ ಸುಮಾರು ೬ ತಿಂಗಳಿಂದ ಹಿಡಿದು ವರ್ಷಗಟ್ಟಲೆ ವಿಳಂಬವಾಗುತ್ತಿದ್ದು, ಇದರಿಂದ ಜನಸಾಮಾನ್ಯರು ಪರದಾಡುವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಇ) ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಏಕಕಾಲಕ್ಕೆ ಗ್ರಾಮ ವ್ಯಾಪ್ತಿ ಆಸ್ತಿಗಳನ್ನು ಸರ್ವೆ ಮಾಡಿಸಿ ಗಣಕೀಕರಣ ಮಾಡಿ ಫಾರ್ಮ– ೯, ಫಾರ್ಮ–೧೧ ಎ, ಫಾರ್ಮ–೧೧ ಬಿ, ನೀಡಲು ಸಾಧ್ಯವಿಲ್ಲವೇ ; ಸಾಧ್ಯವಿದ್ದರೆ ಈ ನಿಟ್ಟಿನಲ್ಲಿ ಸರಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರವಾದ ಮಾಹಿತಿ ನೀಡುವುದು)

## ಗರಡಿ ಮನೆಗಳ ನವೀಕರಣ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೨೧೩ (೩೬೬೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಗರಡಿ ಮನೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಗರಡಿಮನೆ ನವೀಕರಣಕ್ಕೆ ಸರ್ಕಾರ ಅನುದಾನ ನೀಡಲು ಯೋಜನೆ ರೂಪಿಸಿದೆಯೇ ;

(ಇ) ಗರಡಿಮನೆ ನವೀಕರಣ ಸಂದರ್ಭದಲ್ಲಿ ಇಂದಿನ ಅಗತ್ಯವಾದ "ಜಿಮ್" ಕೂಡಾ ಜೋಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಯುವಕರನ್ನು ಆಕರ್ಷಿಸಲು ಗರಡಿ ಮನೆಗೆ ಆದ್ಯತೆ ನೀಡಿ, ಅಭಿವೃದ್ಧಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬರ ಎಂದು ಘೋಷಿಸಿರುವ ತಾಲ್ಲೂಕುಗಳ ವಿವರ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೨೧೪ (೩೬೬೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಬರ ಇದೆ ಎಂದು ಘೋಸಿಷಿರುವ ತಾಲ್ಲೂಕುಗಳು ಎಷ್ಟು ; ಯಾವುದು ; (ವಿವರ ನೀಡುವುದು)

(ಆ) ಬರದ ಕಾರಣ ಬೆಳೆ ವಿಮೆ ಮಾಡಿಸಿದ ರೈತರ ಸಂಖ್ಯೆ ತುಂಬಿದ ಮೊತ್ತ ಹಾಗೂ ವಿಮೆ ಹಣ ಪರಿಹಾರ ರೂಪದಲ್ಲಿ ಪಡೆದ ರೈತರ ಸಂಖ್ಯೆ, ಪಡೆದ ಹಣದ ಮೊತ್ತ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಬೆಳೆ ವಿಮೆ ಪರಿಹಾರ ಬಾಕಿ ಬರಬೇಕಾದ ರೈತರ ಸಂಖ್ಯೆ ಎಷ್ಟು ; (ಪರಿಹಾರ ಮೊತ್ತದ ಮಾಹಿತಿ ಸಹಿತ ನೀಡುವುದು)

(ಈ) ಬೆಳೆ ವಿಮೆ ಪರಿಹಾರದಲ್ಲಿ ಕೇಂದ್ರದ ಪಾಲು ಹಾಗೂ ರಾಜ್ಯದ ಪಾಲಿನ ಶೇಕಡಾ ಎಷ್ಟು ; ಹಾಗೂ ಈಗ ನೀಡಿರುವ ಪರಿಹಾರದಲ್ಲಿ ಕೇಂದ್ರದಿಂದ ಬಂದಿರುವ ಅನುದಾನ ಹಾಗೂ ರಾಜ್ಯ ಸರ್ಕಾರ ನೀಡಿರುವ ಅನುದಾನ ಎಷ್ಟು ? (ಕಳೆದ ಮೂರು ವರ್ಷಗಳ ವಿವರ ನೀಡುವುದು)

## ಬರಗಾಲ ಘೋಷಣೆ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೨೧೫ (೩೬೬೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಬರಗಾಲ ಎಂದು ಘೋಷಣೆ ಮಾಡಿದ ಹೋಬಳಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಬೆಳೆ ವಿಮೆ ತುಂಬಿದ ರೈತರ ಸಂಖ್ಯೆ ಎಷ್ಟು ; ಮೊಬಲಗು ಎಷ್ಟು ; (ಹೋಬಳಿವಾರು ವಿವರ ನೀಡುವುದು)

(ಇ) ಬೆಳೆ ವಿಮೆ ಪಡೆದಿರುವ ರೈತರ ಸಂಖ್ಯೆ ಎಷ್ಟು ; (ವರ್ಷಾವಾರು, ಹೋಬಳಿವಾರು ವಿಮೆ ಮೊತ್ತದ ಸಹಿತ ಮಾಹಿತಿ ನೀಡುವುದು)

(ಈ) ಈವರೆಗೂ ಪರಿಹಾರ ಪಡೆಯದೇ ಇರುವ ರೈತರಿಗೆ ಸರ್ಕಾರ ಪರಿಹಾರ ವಿತರಿಸುವುದು ಯಾವಾಗ ?

## ರಾಜ್ಯದ ಅನುದಾನಿತ ಐ.ಟಿ.ಐ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೩೨೧೬ (೩೬೫೮) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅನುದಾನಿತ ಐ.ಟಿ.ಐ ಸಂಸ್ಥೆಗಳಲ್ಲಿ ವಯೋ ನಿವೃತ್ತಿ ಹಾಗೂ ಇನ್ನಿತರ ಕಾರಣಗಳಿಂದಾಗಿ ಖಾಲಿಯಿರುವ ಹುದ್ದೆಗಳಿಗೆ ೬ ತಿಂಗಳೊಳಗೆ ಭರ್ತಿ ಮಾಡಿಕೊಳ್ಳಬೇಕೆಂಬ ನಿಯಮವಿದೆಯೇ ;

(ಆ) ಇದ್ದಲ್ಲಿ, ರಾಜ್ಯದ ಅನುದಾನಿತ ಐ.ಟಿ.ಐ ಸಂಸ್ಥೆಗಳಲ್ಲಿಯೂ ಇದನ್ನು ಜಾರಿ ಮಾಡಲಾಗಿದೆಯೇ ;

(ಇ) ರಾಜ್ಯದಲ್ಲಿ ಈ ತರಹದ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ;

(ಈ) ಇವುಗಳಲ್ಲಿ ಎಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಮತ್ತು ಬಾಕಿ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು ;

(ಉ) ಉಳಿದ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಯಾವ ಕಾಲಮಿತಿಯಲ್ಲಿ ಪರಿಹಾರ ಒದಗಿಸಲಾಗುವುದು ?

## ಸರ್ಕಾರಿ ಜಮೀನನ್ನು ಕೃಷಿಗಾಗಿ ಒತ್ತುವರಿ ಮಾಡಿರುವ ಪ್ರಕರಣಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೩೨೧೭ (೩೬೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅನೇಕ ತಲೆಮಾರುಗಳಿಂದ ಸರ್ಕಾರಿ ಜಮೀನನ್ನು ಕೃಷಿಗಾಗಿ ಒತ್ತುವರಿ ಮಾಡಿರುವ ಪ್ರಕರಣಗಳೆಷ್ಟು ; (ವಿವರ ನೀಡುವುದು)

(ಆ) ಈ ರೀತಿ ಒತ್ತುವರಿ ಮಾಡದ ಜಮೀನನ್ನು ಸಕ್ರಮಗೊಳಿಸಲು ಸಾಧ್ಯವಾಗದಿದ್ದರೂ ಹೊರ ರಾಜ್ಯದ ರಬ್ಬರ್ ಕೃಷಿಕರ ಅಕ್ರಮ ಒತ್ತುವರಿಯನ್ನು ಸಕ್ರಮಗೊಳಿಸುವ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ರೀತಿ ಸಕ್ರಮ ಮಾಡಿದ ಸರ್ಕಾರಿ ಜಮೀನನ್ನು ತೆರವುಗೊಳಿಸಲು ಹಾಗೂ ಅನಧೀಕೃತವಾಗಿ ಸಕ್ರಮಗೊಳಿಸಲು ಸಹಕರಿಸಿದ ಇಲಾಖಾ ಅಧಿಕಾರಿಗಳ ಮೇಲೆ ಏನು ಕ್ರಮ ಜರುಗಿಸಲಾಗಿದೆ ? (ವಿವರ ನೀಡುವುದು)

## ರಾಜ್ಯದಲ್ಲಿ ಅನುದಾನಿತ ಐ.ಟಿ.ಐ. ತರಬೇತಿ ಸಿಬ್ಬಂದಿಗಳಿಗೆ ಸೇವಾ ಸೌಲಭ್ಯಗಳ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೩೨೧೮ (೩೬೫೬) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅನುದಾನಿತ ಐ.ಟಿ.ಐ. ತರಬೇತಿ ಸಿಬ್ಬಂದಿಗಳಿಗೆ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ ಹಾಗೂ ಇತರೆ ಸೇವಾ ಸೌಲಭ್ಯಗಳನ್ನು ವಿಸ್ತರಿಸಲಾಗಿದೆಯೇ ;

(ಆ) ಈ ಸೌಲಭ್ಯವನ್ನು ಕೋರಿ ಕಳೆದ ೩ ವರ್ಷಗಳಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ ;

(ಇ) ಈ ಸೌಲಭ್ಯಕ್ಕೆ ಸಂಬಂಧಿಸಿದಂತೆ ಐ.ಟಿ.ಐ. ಇಲಾಖೆಯಲ್ಲಿ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಈ ರೀತಿ ಬಾಕಿ ಉಳಿಯಲು ಇರುವ ಕಾರಣಗಳೇನು ;

(ಈ) ಅರ್ಜಿಗಳನ್ನು ಯಾವ ಕಾಲ ಮಿತಿಯಲ್ಲಿ ಇತ್ಯರ್ಥ ಪಡಿಸಲಾಗುವುದು?

## ಗುಡಿಸಲು ಮುಕ್ತ ರಾಜ್ಯ ಯೋಜನೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೩೨೧೯ (೩೭೧೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ೪ ವರ್ಷಗಳಲ್ಲಿ "ಗುಡಿಸಲು ಮುಕ್ತ ರಾಜ್ಯ" ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ;

(ಆ) ಈ ಯೋಜನೆಯಡಿಯಲ್ಲಿ ಕಳೆದ ೪ ವರ್ಷಗಳಲ್ಲಿ ಹಂಚಿಕೆ ಮಾಡಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ಯೋಜನೆಯನ್ನು ಯಾವ ಯಾವ ಸರ್ಕಾರಿ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಲಾಗಿದೆ ; (ವರ್ಗಾವಾರು, ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

(ಈ) ಕಳೆದ ೪ ವರ್ಷಗಳಲ್ಲಿ ಈ ಯೋಜನೆಗಾಗಿ ಖರ್ಚು ಮಾಡಿರುವ ಹಣ ಎಷ್ಟು ?

## ಪೋಡಿ ಮುಕ್ತ ಗ್ರಾಮ

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೩೨೨೦ (೩೭೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪೋಡಿಮುಕ್ತ ಗ್ರಾಮಗಳನ್ನಾಗಿ ಮಾಡುವ ಯೋಜನೆಯನ್ನು ಯಾವಾಗಿನಿಂದ ಜಾರಿಗೊಳಿಸಲಾಯಿತು ;

(ಆ) ಈ ಯೋಜನೆಯಡಿ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಚೇಳೂರು ಹೋಬಳಿಯ ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ ;

(ಇ) ಚೇಳೂರು ಹೋಬಳಿ ಮಾದೇನಹಳ್ಳಿ ಗ್ರಾಮದ ಸರ್ವೆ ನಂ. ೧೩೩ನ್ನು ಪೋಡಿ ಮಾಡದಿರಲು ಕಾರಣಗಳೇನು ;

(ಈ) ಈ ನಂಬರಿನ ಕರಾಬು ಹಾಗೂ ಇತರೆ ದಾಖಲೆಗಳು ಮಾಹಿತಿ ಹಕ್ಕು ಕಾಯ್ದೆಯಡಿ ಲಭ್ಯವಾಗಿದ್ದು ಸರ್ವೇಯರ್‌ಗಳಿಗೆ ಲಭ್ಯವಾಗದಿರುವುದು ನಿಜವೇ ;

(ಉ) ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಕರ್ತವ್ಯ ಲೋಪ ಎಸಗುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಊ) ಈ ಸರ್ವೇ ನಂಬರ್‌ನ್ನು ಯಾವ ಕಾಲಮಿತಿಯೊಳಗೆ ಪೋಡಿ ಮಾಡಲಾಗುವುದು ?

## ಹೊಸ ಭೂ ಸ್ವಾಧೀನ ಕಾಯ್ದೆ

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೩೨೨೧ (೩೭೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೊಸ ಭೂ ಸ್ವಾಧೀನ ೨೦೧೩ರ ಕಲಂ ೨೪(೨)ರಲ್ಲಿ ಇರುವ ಪ್ರಾವಿಧಾನವೇನು ; (ವಿವರವಾಗಿ ತಿಳಿಸುವುದು)

(ಆ) ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು, ಕಸಬಾ ಹೋಬಳಿ, ಹಿರೇಮಲ್ಲಿಗೆವಾಡ ಗ್ರಾಮದ ಸರ್ವೇ ನಂ. ೩೪ರಲ್ಲಿ ಕರ್ನಾಟಕ ಗೃಹ ಮಂಡಳಿಯವರು ಭೂ ಸ್ವಾಧೀನದಿಂದ ಕೈಬಿಟ್ಟಿರುವ ಜಮೀನು ಎಷ್ಟು ;

(ಇ) ಕರ್ನಾಟಕ ಗೃಹ ಮಂಡಳಿಯಿಂದ ದಿನಾಂಕ: ೧೫.೧೨.೨೦೧೨ ಮತ್ತು ದಿನಾಂಕ: ೦೯.೦೭.೨೦೧೪ರಂದು ಪತ್ರ ಹಾಗೂ ನಿರ್ಣಯಗಳು ಬಂದಿರುವುದು ನಿಜವೇ ;

(ಈ) ಹಾಗಾದರೆ ಈ ಜಮೀನನ್ನು ಭೂ ಸ್ವಾಧೀನತೆಯಿಂದ ಕೈಬಿಟ್ಟ ಆದೇಶ ಹೊರಡಿಸಲು ಇರುವ ತೊಂದರೆಗಳೇನು ; ಇದರ ಸಂಬಂಧ ಯಾವ ಕಡತದಲ್ಲಿ ವ್ಯವಹಾರ ನಡೆದಿದೆ ; ಕಡತದ ಸಂಖ್ಯೆಯೊಂದಿಗೆ ವಿವರವಾದ ಮಾಹಿತಿ ನೀಡುವುದು ;

(ಉ) ಯಾವ ಕಾಲಮಿತಿಯೊಳಗೆ ಈ ಜಮೀನನ್ನು ಭೂ ಸ್ವಾಧೀನತೆಯಿಂದ ಕೈಬಿಟ್ಟು ಆದೇಶ ಹೊರಡಿಸಲಾಗುವುದು ?

## ಸಾಮಾಜಿಕ ಪರಿಣಾಮ ಮೌಲ್ಯಮಾಪನ

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೩೨೨೩ (೩೭೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹೊಸ ಭೂ ಸ್ವಾಧೀನ ಕಾಯ್ದೆ ಅನ್ವಯ ಸಾಮಾಜಿಕ ಪರಿಣಾಮ ಮೌಲ್ಯಮಾಪನ (S.I.A)ವನ್ನು ಯಾವ ಯಾವ ಭೂ ಸ್ವಾಧೀನ ಜಮೀನುಗಳಿಗೆ ಅನ್ವಯಿಸಲಾಗಿದೆ ; ಇದರಿಂದ ಯಾವ ವಿವಿಧ ಭೂಸ್ವಾಧೀನ ಜಮೀನುಗಳು ವಿನಾಯಿತಿ ಪಡೆದಿರುತ್ತವೆ ; (ವಿವರವಾದ ಮಾಹಿತಿ ಕೊಡುವುದು)

(ಆ) ರಾಜ್ಯದಲ್ಲಿ (S.I.A) ಯನ್ನು ಕಾರ್ಯಗತಗೊಳಿಸಲು ನೋಂದಾವಣೆ ಆದ ಎನ್.ಜಿ.ಓ. ಗಳ ಸಂಖ್ಯೆ ಎಷ್ಟು ; (ವಿಳಾಸ, ನೋಂದಣಿಯಾದ ದಿನಾಂಕದೊಂದಿಗೆ ಮಾಹಿತಿ ನೀಡುವುದು)

(ಇ) ನೋಂದಾವಣೆಯಾದ ಎನ್.ಜಿ.ಓ. ಗಳು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಭೂ ಸ್ವಾಧೀನ ಜಮೀನುಗಳ ಸಾಮಾಜಿಕ ಪರಿಣಾಮ ಮೌಲ್ಯಮಾಪನ (S.I.A)ವನ್ನು ಮಾಡಿವೆ ; ಇದರ ಸಂಬಂಧ ಇವು ಪಡೆದಿರುವ ಹಣ ಎಷ್ಟು ; (ವಿವರವಾಗಿ ಜಿಲ್ಲಾವಾರು ಮಾಹಿತಿ ಕೊಡುವುದು)

(ಈ) ಸಾಮಾಜಿಕ ಪರಿಣಾಮ ಮೌಲ್ಯಮಾಪನ (S.I.A) ಮಾಡುವುದರಿಂದ ಸರ್ಕಾರ ಹಾಗೂ ಜನರಿಗೆ ಆಗುವ ಪ್ರಯೋಜನಗಳೇನು ?

## ಗ್ರಾಮ ಸಹಾಯಕರ ಮಾಸಿಕ ವೇತನ

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೩೨೨೪ (೩೭೭೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ಕೊಡುವುದು)

(ಆ) ಸದರಿ ನೌಕರರಿಗೆ ನೀಡುತ್ತಿರುವ ಮಾಸಿಕ ವೇತನ ಎಷ್ಟು ; ಇವರು ೨೫ ವರ್ಷಗಳಿಂದ ಕಡಿಮೆ ವೇತನಕ್ಕೆ ಕೆಲಸ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದರೆ, ಇವರನ್ನು ಸರ್ಕಾರವು ಗ್ರೂಪ್ ಡಿ ದರ್ಜೆ ನೌಕರರೆಂದು ಪರಿಗಣಿಸಿ ಆದೇಶ ಹೊರಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ;

(ಈ) ಈಗಾಗಲೇ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಗಳನ್ನು ರೂಪಿಸಿ ವಿಲೀನಗೊಳಿಸಿದಂತೆ ಸದರಿ ಸಿಬ್ಬಂದಿಗಳನ್ನು ವಿಲೀನಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು ;

(ಉ) ಇದರ ಸಂಬಂಧ ನ್ಯಾಯಾಲಯದ ಆದೇಶಗಳು ಏನಿವೆ ; (ವಿವರವಾದ ಮಾಹಿತಿ ನೀಡುವುದು)

(ಊ) ಹಾಗಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು ?

## ಕೌಶಲ್ಯಭಿವೃದ್ಧಿ ಉದ್ಯಮಶೀಲತೆ ಯೋಜನೆ

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೩೨೨೫ (೩೭೭೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೌಶಲ್ಯಾಭಿವೃದ್ಧಿ ಉದ್ದಿಮೆಶೀಲತೆ, ಮತ್ತು ಜೀವನೋಪಾಯ ಇಲಾಖೆಯಡಿ ಹಾಲಿ ಜಾರಿ ಇರುವ ಯೋಜನೆಗಳಾವುವು ; ಇವುಗಳಿಗೆ ಕಳೆದ ೩ ವರ್ಷಗಳಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ ; (ವಿವರವಾಗಿ ಯೋಜನೆವಾರು ಮಾಹಿತಿ ಕೊಡುವುದು)

(ಆ) ಸದರಿ ಇಲಾಖೆಗೆ ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ; ಇದನ್ನು ಯಾವ ಯಾವ ಯೋಜನೆಗಳಿಗೆ ವಿನಿಯೋಗಿಸಲಾಗಿದೆ ; (ವಿವರವಾದ ಮಾಹಿತಿ ಕೊಡುವುದು)

(ಇ) ಈ ಇಲಾಖೆಯಡಿ ಕೆಲಸ ನಿರ್ವಹಿಸುತ್ತಿರುವ ನೌಕರರು ಎಷ್ಟು ; (ವಿವರವಾಗಿ ನೌಕರರ ಹೆಸರು, ಹುದ್ದೆಯ ಪದನಾಮ, ವೇತನ ಶ್ರೇಣಿ, ಪಡೆಯುತ್ತಿರುವ ತಿಂಗಳ ವೇತನ ಸಹಿತ ಮಾಹಿತಿ ಕೊಡುವುದು)

(ಈ) ಸಮಾಲೋಚನಾ ಶುಲ್ಕ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರು ಎಷ್ಟು ; (ವಿವರವಾಗಿ ಹುದ್ದೆಯ ಪದನಾಮ, ಪಡೆಯುತ್ತಿರುವ ಸಮಾಲೋಚನಾ ಶುಲ್ಕದೊಂದಿಗೆ ಮಾಹಿತಿ ಕೊಡುವುದು)

(ಉ) ಕೌಶಲ್ಯಾಭಿವೃದ್ಧಿ ಉದ್ದಿಮೆಶೀಲತೆ ಯೋಜನೆಯಡಿ ಕಳೆದ ೩ ವರ್ಷಗಳಲ್ಲಿ ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಹಣ ನೀಡಲಾಗಿದೆ? (ಸಂಸ್ಥೆವಾರು ವಿವರವಾದ ಮಾಹಿತಿ ಕೊಡುವುದು)

## ಕಂದಾಯ ಇಲಾಖೆಯಲ್ಲಿ ತ್ವರಿತ ಆಡಳಿತಕ್ಕೆ ಕ್ರಮ

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೨೬ (೩೭೪೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ತಹಶೀಲ್ದಾರ್‌ರವರ ಕಛೇರಿಗಳಲ್ಲಿ ಸಮರ್ಪಕವಾಗಿ ಸಾರ್ವಜನಿಕ ಕೆಲಸಕಾರ್ಯಗಳು ಅಗದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರಿ ಕಛೇರಿಗಳಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದ್ದು, ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತ ನೀಡಲು ಸಿ.ಸಿ.ಟಿವಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಪ್ರತಿಯೊಂದು ಹೋಬಳಿ ಮಟ್ಟದಲ್ಲಿ ನಾಡ ಕಛೇರಿಗಳನ್ನು ಆರಂಭಿಸಿ ನೆಮ್ಮದಿ ಕೇಂದ್ರಗಳ ಮೂಲಕ ಸಾರ್ವಜನಿಕ ಕೆಲಸ ಕಾರ್ಯಗಳನ್ನು ತ್ವರಿತಗತಿಯಲ್ಲಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ಕಾಡು ಪ್ರಾಣಿಗಳಿಂದ ಬೆಳೆ ನಾಶವಾದರೆ ಪರಿಹಾರ

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೨೭ (೩೭೪೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆ ನಾಶವಾದರೆ ರೈತರಿಗೆ ಯಾವ ರೀತಿ ಪರಿಹಾರ ನೀಡಲಾಗುತ್ತದೆ ; ಬೆಳೆ ನಷ್ಟದ ಸಂಪೂರ್ಣ ಹಣವನ್ನು ಪರಿಹಾರ ರೂಪದಲ್ಲಿ ನೀಡಲಾಗುವುದೆ;

(ಆ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಪ್ರಕರಣಗಳು ವರದಿಯಾಗಿವೆ ; ಎಷ್ಟು ಇಂತಹ ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ ; (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

(ಇ) ವನ್ಯ ಜೀವಿಗಳ ದಾಳಿಯಿಂದ ಜೀವ ಹಾನಿಯಾದರೆ ಯಾವ ರೀತಿಯ ಪರಿಹಾರ ನೀಡಲಾಗುವುದು ; ಇಂತಹ ಎಷ್ಟು ಪ್ರಕರಣಗಳು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವರದಿಯಾಗಿದೆ ? (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

## ರಾಕ್‌ಗಾರ್ಡನ್ ನಿರ್ಮಾಣಕ್ಕೆ ಅನಧಿಕೃತವಾಗಿ ಅರಣ್ಯ ಇಲಾಖೆಗೆ ಸಂಬಂಧಿಸಿದ ಸ್ಥಳದಿಂದ ಕೆಂಪು ಮಣ್ಣು ತೆಗೆಯುತ್ತಿರುವ ಬಗ್ಗೆ

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೨೮ (೩೬೮೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರವಾರ ಜಿಲ್ಲೆಯ ಕಾರವಾರ ಪಟ್ಟಣದಲ್ಲಿ ನಿರ್ಮಿತಿ ಕೇಂದ್ರದಿಂದ ಮಾಡುತ್ತಿರುವ ರಾಕ್‌ಗಾರ್ಡನ್‌ಗೆ ಯಾವುದೇ ಇಲಾಖೆಯ ಅನುಮತಿ ಪಡೆಯದೇ ಅಕ್ರಮವಾಗಿ ಸಮೀಪದ ಗುಡ್ಡದಿಂದ ಕೆಂಪು ಮಣ್ಣು ತೆಗೆದು, ಗಾರ್ಡನಿನ ಲ್ಯಾಂಡ್ ಸ್ಕೇಪಿಂಗ್‌ಗೆ

ಮಣ್ಣು ತುಂಬುವ ಕಾರ್ಯ ಮಾಡುತ್ತಿದ್ದರಿಂದ ಅಲ್ಲಿಯ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿ ಮಣ್ಣು ತೆಗೆಯುವುದನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು)

(ಆ) ಈ ರೀತಿ ಅನಧಿಕೃತವಾಗಿ ಮಣ್ಣು ತೆಗೆಯಲು ಸದರಿ ರಾಕ್‌ಗಾರ್ಡನಿನ ಅಂದಾಜು ಪತ್ರಿಕೆಯಲ್ಲಿ ನಮೂದಿಸಿರುತ್ತದೆಯೇ; ಹಾಗಾದರೆ, ಮಣ್ಣು ಹಾಕಲು ಮಂಜುರಿ ಪತ್ರಿಕೆಯಲ್ಲಿ ಅವಕಾಶವಿಲ್ಲವೇ ; ವಿವರ ನೀಡುವುದು ; (ಅಂದಾಜು ಪತ್ರಿಕೆ ಸಮೇತ ವರದಿ ನೀಡುವುದು)

(ಇ) ಸದರಿ ಮಣ್ಣು ತೆಗೆಯಲು ಅರಣ್ಯ ಇಲಾಖೆಯಿಂದ ಪರವಾನಿಗೆ ಪತ್ರ ಪಡೆಯಲಾಗಿದೆಯೇ ; ಅರಣ್ಯ ಇಲಾಖೆಗೆ ಸದರಿ ಮಣ್ಣು ತೆಗೆದ ಬಗ್ಗೆ ಪಾವತಿಸಿರುವ ಹಣ ಎಷ್ಟು ; (ವರದಿ ನೀಡುವುದು)

(ಈ) ಬೇರೆ ಬೇರೆ ಕಾಮಗಾರಿಗಳಿಗೆ ಅನುದಾನ ಮಂಜೂರಾದರು ಅನಧಿಕೃತವಾಗಿ ಬೇರೆ ಬೇರೆ ವಲಯದಿಂದ ಕಚ್ಚಾ ಸಾಮಗ್ರಿಗಳನ್ನು ಪೂರೈಸಿಕೊಂಡು ಅದರ ಖರ್ಚು ವೆಚ್ಚ ತೋರಿಸಿ ಹಣ ಕೊಳ್ಳೆ ಹೊಡೆಯುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಸೂಕ್ತ ತನಿಖೆ ಮಾಡುವುದೇ ? (ವಿವರ ನೀಡುವುದು)

## ನಿರ್ಮಿತಿ ಕೇಂದ್ರದಿಂದ ಅಭಿವೃದ್ಧಿ ಕಾಮಗಾರಿಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೯ (೩೬೮೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಿರ್ಮಿತಿ ಕೇಂದ್ರದಿಂದ ೨೦೧೨–೧೩ನೇ ಸಾಲಿನಿಂದ ೨೦೧೬–೧೭ನೇ ಸಾಲಿನವರೆಗೆ ಯಾವ ಯಾವ ಯೋಜನೆಯ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ; (ಶೀರ್ಷಿಕೆವಾರು, ಜಿಲ್ಲಾವಾರು / ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಕಾಮಗಾರಿಗಳು ಸಮರ್ಪಕವಾಗಿ ನಿರ್ವಹಣೆ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ಸದರಿ ಕಾಮಗಾರಿಗಳಲ್ಲಿ ಅನೇಕ ಕಡೆ ಕಳಪೆ ಮಟ್ಟದ ಕಾಮಗಾರಿ ಆಗಿದೆ ಎಂಬ ದೂರುಗಳಿರುವುದು ಸಂಬಂಧಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು ; (ವಿವರ ನೀಡುವುದು)

(ಈ) ಈಗಾಗಲೇ ೨೦೧೩–೧೪ನೇ ಸಾಲಿನಿಂದ ೨೦೧೬–೧೭ನೇ ಸಾಲಿನವರೆಗೆ ಅಭಿವೃದ್ಧಿ ಕಾರ್ಯಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಕಾಮಗಾರಿಗಳು ಪ್ರಗತಿ ಯಾವ ಹಂತದಲ್ಲಿದೆ ; (ವಿವರ ನೀಡುವುದು) ಇಲ್ಲಿಯವರೆಗೆ ತಾಲ್ಲೂಕುವಾರು ಕಾಮಗಾರಿ ಮಾಡಿರುವ ಬಗ್ಗೆ ಜಿಲ್ಲಾ ನಿರ್ಮಿತಿ ಯೋಜನಾಧಿಕಾರಿಯಿಂದ ಬಿಲ್ಲು ನೀಡಿ ಅನುದಾನ ಬಿಡುಗಡೆ ಮಾಡಿಸಿಕೊಂಡ ಬಗ್ಗೆ ಸವಿಸ್ತಾರ ವರದಿ (ಜಿಲ್ಲಾವಾರು / ತಾಲ್ಲೂಕುವಾರು) ಸಹಾಯಕ ಅಭಿಯಂತರರು ನೀಡಿರುವ ಬಿಲ್ಲು ವಗೈರೆ ಸಹಿತ ವರದಿ ನೀಡುವುದು)

## ಗುತ್ತಿಗೆದಾರರಿಗೆ ಹಣ ಪಾವತಿಸದೇ ಇರುವ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೩೦ (೩೫೦೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆನರಾ ವೃತ್ತದ ಹಳಿಯಾಳ ವಿಭಾಗದಲ್ಲಿ ೨೦೧೦–೧೧ನೇ ಸಾಲಿನಲ್ಲಿ ಕಿಲ್ಲಾ ಗಾರ್ಡನ್ ಹಾಗೂ ಮರಡಿಗುಡ್ಡಾದಲ್ಲಿ ಎರೆಡೆರಡು ಶೌಚಾಲಯ ನಿರ್ಮಾಣ ಮಾಡಿರುವ ಗುತ್ತಿಗೆದಾರರಿಗೆ ಅನುದಾನ ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಗುತ್ತಿಗೆದಾರರು ಅನೇಕ ಬಾರಿ ಇಲಾಖೆಗೆ ಹೋಗಿ ಕಾಮಗಾರಿ ಮಾಡಿರುವ ಬಿಲ್ಲನ್ನು ನೀಡಲು ವಿನಂತಿಸಿದರೂ ಇಲ್ಲಿಯವರೆಗೆ ಬಿಲ್ ಪಾವತಿಸದಿರಲು ಕಾರಣವೇನು ? (ವಿವರ ನೀಡುವುದು)

## ದಂಡಕಾರಣ್ಯದ ಇಕೋಪಾರ್ಕ್‌ನ ಕಾಮಗಾರಿಯಲ್ಲಿ ಅವ್ಯವಹಾರ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೩೧ (೩೫೦೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆನರಾ ವೃತ್ತದ ಹಳಿಯಾಳ ವಿಭಾಗದ ದಾಂಡೇಲಿ ವಲಯದಲ್ಲಿ ದಂಡಕಾರಣ್ಯ ಇಕೋಪಾರ್ಕ್‌ನ ಕಳಪೆ ಕಾಮಗಾರಿ ಹಾಗೂ ಅರಣ್ಯ ಇಲಾಖೆಯ ನಿಯಮ ಬಾಹಿರ ಟೆಂಡರ್‌ನಿಂದ ಲಕ್ಷಾಂತರ ರೂಪಾಯಿ ಅವ್ಯವಹಾರ ಆಗಿರುವ ಬಗ್ಗೆ ಸಾರ್ವಜನಿಕರು ಅರಣ್ಯ ಜಾಗೃತಿ ಸ್ಥಳಕ್ಕೆ ದೂರು ನೀಡಿ ತನಿಖೆ ಮಾಡಲು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು)

(ಆ) ಸದರಿ ದಂಡಕಾರಣ್ಯ ಇಕೋಪಾರ್ಕ್‌ನ ಯೋಜನೆಯ ಒಟ್ಟು ಅನುದಾನವೆಷ್ಟು ;

(ಇ) ಸದರಿ ಇಕೋಪಾರ್ಕ್‌ನಲ್ಲಿ ಮಾಡಿರುವ ಪ್ರತಿಯೊಂದು ಕೆಲಸದ ವಿವರ, ಅದಕ್ಕೆ ಆಗಿರುವ ಖರ್ಚು ಹಾಗೂ ಕೆಲಸ ನಿರ್ವಹಿಸಿದವರ ವಿವರ ಒದಗಿಸುವುದು ;

(ಈ) ಈ ಕಳಪೆ ಕಾಮಗಾರಿ ಬಗ್ಗೆ ಲೋಕಾಯುಕ್ತರಿಂದ ಸೂಕ್ತ ತನಿಖೆ ಮಾಡಿಸಲಾಗುವುದೇ ? (ವಿವರ ನೀಡುವುದು)

## ರಾಜ್ಯದ ಬೀಡಿ ಕಾರ್ಮಿಕರ ಹಿತರಕ್ಷಣೆಯ ಬಗ್ಗೆ

**ಶ್ರೀ ಐವನ್ 'ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೩೨೩೨ (೩೬೫೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು ; ಬೀಡಿ ಕಾರ್ಮಿಕರ ಸಂಖ್ಯೆ ಇಳಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಇದಕ್ಕೆ ಕಾರಣಗಳೇನು ; ಬದಲಿ ಕೆಲಸದ ಬಗ್ಗೆ ಇಲಾಖೆ ಚಿಂತಿಸುತ್ತಿದೆಯೇ ; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

(ಆ) ಬೀಡಿ ಕಾರ್ಮಿಕರಿಗೆ ಸಿಗುವ ಸವಲತ್ತುಗಳನ್ನು ಸಮಯಕ್ಕೆ ಸರಿಯಾಗಿ ನೀಡದಿರುವ ಬಗ್ಗೆ ದೂರುಗಳಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಇ) ಎಷ್ಟು ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ನೀಡಲಾಗಿದೆ ? (ಜಿಲ್ಲಾವಾರು ವಿವರ ಒದಗಿಸುವುದು)

## ಮಂಗಳೂರಿನಲ್ಲಿ ಕಾರ್ಮಿಕ ಭವನದ ಕಾಮಗಾರಿಗಳ ಮತ್ತು ಕಾರ್ಮಿಕರ ಬಗ್ಗೆ

**ಶ್ರೀ ಐವನ್ 'ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೩೨೩೩ (೩೬೫೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರಿನಲ್ಲಿ ಕಾರ್ಮಿಕ ಭವನ ರಚಿಸಲು ಸ್ಥಳ ಮಂಜೂರು ಮಾಡಿ ಅನುದಾನ ಒದಗಿಸಿದ್ದರೂ ಕಾಮಗಾರಿ ಪ್ರಾರಂಭಿಸದಿರಲು ಕಾರಣಗಳೇನು ; (ವಿವರ ಒದಗಿಸುವುದು)

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ರಿಕ್ಷಾ ಮತ್ತು ಬಸ್ಸು ಕಾರ್ಮಿಕರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳು ಯಾವುವು ? (ವಿವರ ಒದಗಿಸುವುದು)

## ವನ್ಯ ಜೀವಿಗಳಿಂದ ಜನತೆಗೆ ಸಂರಕ್ಷಣೆಯನ್ನು ಒದಗಿಸುವ ಬಗ್ಗೆ

**ಶ್ರೀ ಐವನ್ 'ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೩೨೩೪ (೩೬೫೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆನೆಗಳ ಹಾವಳಿಯಿಂದ ರಾಜ್ಯದಲ್ಲಿ ಉಂಟಾದ ಜೀವ ನಷ್ಟ ಎಷ್ಟು ; ಜೀವ ಕಳೆದುಕೊಂಡವರಿಗೆ ಎಷ್ಟು ಪರಿಹಾರ ನೀಡಲಾಗಿದೆ ; ವಿವರ ಒದಗಿಸುವುದು ;

(ಆ) ಆನೆಗಳ ಹಾವಳಿಯನ್ನು ತಡೆಯಲು ಇಲಾಖೆ ಕೈಗೊಂಡ ಕ್ರಮಗಳೇನು ; ಆನೆಗಳು ಬರದಂತೆ ರೈಲ್ವೆ ಮಾದರಿಯ ಬೇಲಿ ತಂತಿಗಳನ್ನು ಅಳವಡಿಸಲು ಖರ್ಚು ಮಾಡಿದ ಹಣವೆಷ್ಟು ; (ವಿವರ ಒದಗಿಸುವುದು)

(ಇ) ರಾಜ್ಯದ ಅರಣ್ಯದಲ್ಲಿರುವ ಒಟ್ಟು ಆನೆ ಸಂಖ್ಯೆ ಎಷ್ಟು; ಆನೆಗಳ ಸಂರಕ್ಷಣೆಗೆ ಇಲಾಖೆ ಹೊಂದಿರುವ ಯೋಜನೆಗಳು ಯಾವುವು ; ವಿವರ ಒದಗಿಸುವುದು ?

## ರಾಜ್ಯದಲ್ಲಿರುವ ಕಿಂಡಿ ಅಣೆಕಟ್ಟುಗಳ ಅಭಿವೃದ್ಧಿಯ ಬಗ್ಗೆ

**ಶ್ರೀ ಐವನ್ 'ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೩೨೩೫ (೩೬೫೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಕಿಂಡಿ ಅಣೆಕಟ್ಟುಗಳು ಎಷ್ಟು; ಕಿಂಡಿ ಅಣೆಕಟ್ಟುಗಳನ್ನು ಎಂ.ಎನ್.ಆರ್.ಜಿ ಮುಖಾಂತರ ಕಟ್ಟಲು ಇಲಾಖೆ ಪ್ರೋತ್ಸಾಹಿಸಿದೆಯೇ ; (ವಿವರ ಒದಗಿಸುವುದು)

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಒಟ್ಟು ಕಿಂಡಿ ಅಣೆಕಟ್ಟುಗಳ ಸಂಖ್ಯೆ ಎಷ್ಟು; ನಿರ್ವಾಹಣೆಗಾಗಿ ಖರ್ಚು ಮಾಡಿದ ವೆಚ್ಚ ಎಷ್ಟು; ಎಷ್ಟು ಕಿಂಡಿ ಅಣೆಕಟ್ಟುಗಳಲ್ಲಿ ಹಲಗೆ ಅಳವಡಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ಒದಗಿಸುವುದು)

(ಇ) ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯು ಕಳಪೆ ಮಟ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಕೌಶಲ್ಯ ತರಬೇತಿ ಯೋಜನೆಯಡಿಯಿಂದ ದಮನಿತ ಮಹಿಳೆ / ಲಿಂಗತ್ವ ಅಲ್ಪಸಂಖ್ಯಾತರು ಸ್ವಾವಲಂಬಿಗಳಾಗಲು ಯೋಜನೆ ರೂಪಿಸುವ ಕುರಿತು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೩೨೩೬ (೩೮೩೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ದಮನಿತ ಮಹಿಳೆಯರು / ಲಿಂಗತ್ವ ಅಲ್ಪಸಂಖ್ಯಾತರು ಮತ್ತು ಅವರ ಮಕ್ಕಳನ್ನು ಆರ್ಥಿಕವಾಗಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಬಲಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ;

(ಆ) ಕೌಶಲ್ಯ ತರಬೇತಿ ಯೋಜನೆಯಡಿಯಲ್ಲಿ ಇವರಿಗೆ ಸೂಕ್ತ ಅವಕಾಶ ಕಲ್ಪಿಸಿಕೊಡಲಾಗಿದೆಯೇ ; ನೀಡಿದ್ದಲ್ಲಿ, ಜಿಲ್ಲಾವಾರು ಅಂಕಿ ಅಂಶಗಳ ವಿವರ ನೀಡುವುದು ;

(ಇ) ಎಷ್ಟು ದಮನಿತ ಮಹಿಳೆಯರು / ಲಿಂಗತ್ವ ಅಲ್ಪಸಂಖ್ಯಾತರಿಗೆ ಉದ್ಯೋಗವಾಕಾಶಗಳನ್ನು ಅಥವಾ ಸ್ವಯಂ ಉತ್ಪಾದಿತ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸಿಕೊಡಲಾಗಿದೆ ; (ಜಿಲ್ಲಾವಾರು ಅಂಕಿ ಅಂಶಗಳ ವಿವರ ನೀಡುವುದು)

(ಈ) ಈ ವಿಶೇಷ ಯೋಜನೆಯನ್ನು ಮತ್ತು ಅದರ ಪ್ರಯೋಜನೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆಯೇ ; (ವಿವರ ನೀಡುವುದು)

(ಉ) ಈ ಕೌಶಲ್ಯ ತರಬೇತಿ ಯೋಜನೆಯ ಮುಖಾಂತರ ಎಷ್ಟು ದಮನಿತ ಮಹಿಳೆಯರು / ಲಿಂಗತ್ವ ಅಲ್ಪಸಂಖ್ಯಾತರು ಸ್ವಾವಲಂಬಿ ಬದುಕು ಸೃಷ್ಟಿಸಿಕೊಂಡಿದ್ದಾರೆ ? (ಜಿಲ್ಲಾವಾರು, ಅಂಕಿ ಅಂಶ ವಿವರ ನೀಡುವುದು)

## ರಾಜ್ಯದಲ್ಲಿ ಅತಿವೃಷ್ಠಿ / ಅನಾವೃಷ್ಠಿಯಿಂದ ಬಾಧಿತರಾದವರಿಗೆ ಪರಿಹಾರ ನೀಡುವ ಕುರಿತು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೩೨೩೭ (೩೭೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭–೧೮ನೇ ಸಾಲಿನಲ್ಲಿ ರಾಜ್ಯಾದ್ಯಂತ ಅತಿವೃಷ್ಠಿ / ಅನಾವೃಷ್ಠಿಗೊಳಗಾಗಿರುವ ಜಿಲ್ಲೆಗಳು / ತಾಲ್ಲೂಕುಗಳು / ಗ್ರಾಮಗಳು ಯಾವುವು ; (ವಿವರ ನೀಡುವುದು)

(ಆ) ಸದರಿ ಸಾಲಿನಲ್ಲಿ ಎಷ್ಟು ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಲು ಸರ್ಕಾರ ಕ್ರಮಕೈಗೊಂಡಿದೆ ;

(ಇ) ಅತಿವೃಷ್ಠಿ / ಅನಾವೃಷ್ಠಿಯಾಗಿ ಬೆಳೆಹಾನಿಗೆ ಒಳಗಾದ ಬಾಧಿತ ರೈತರಿಗೆ ಸರ್ಕಾರದಿಂದ ನೀಡಲಾಗಿರುವ ಪರಿಹಾರ ಮೊತ್ತ ಎಷ್ಟು ? (ಜಿಲ್ಲಾವಾರು, / ತಾಲ್ಲೂಕುವಾರು ವಿವರ ನೀಡುವುದು)

## ರಾಜ್ಯದ ಅರಣ್ಯ ಭಾಗದಲ್ಲಿ ಕೃಷಿ ಚಟುವಟಿಕೆ ನಡೆಸಿರುವ ಜನರ / ಕೃಷಿಕರ ಸಮೀಕ್ಷೆ ನಡೆಸುವ ಬಗ್ಗೆ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೩೨೩೮ (೩೭೨೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅರಣ್ಯ ಭಾಗದಲ್ಲಿ ಕೃಷಿ ಚಟುವಟಿಕೆ ನಡೆಸಿರುವ ಜನರ / ಕೃಷಿಕರ ಸಮೀಕ್ಷೆ ನಡೆಸುವ ಉದ್ದೇಶ ಇದೆಯೇ ;

(ಆ) ಸಮೀಕ್ಷೆ ನಡೆಸಿದ ಪಕ್ಷದಲ್ಲಿ ಸರ್ಕಾರ ಜಿಲ್ಲಾ ಮಟ್ಟದಲ್ಲಿ / ತಾಲ್ಲೂಕು ಮಟ್ಟದಲ್ಲಿ / ಗ್ರಾಮ ಮಟ್ಟದಲ್ಲಿ ತೆಗೆದುಕೊಂಡ ಕ್ರಮವೇನು ; ಸಮೀಕ್ಷೆ ಮಾಡದೇ ಇದ್ದರೆ ಸೂಕ್ತ ಕಾರಣಗಳನ್ನು ನೀಡುವುದು ;

(ಇ) ಸದರಿ ಅರಣ್ಯ ಭಾಗಗಳಲ್ಲಿ ಕೃಷಿ ಚಟುವಟಿಕೆ ಮಾಡುವ ಜನರಿಗೆ ಸರ್ಕಾರವು ಯಾವ ರೀತಿಯ ಪರಿಹಾರ ನೀಡಲು ಚಿಂತಿಸಿದೆ ;

(ಈ) ಗ್ರಾಮ ಮಟ್ಟದ ಅರಣ್ಯ ಹಕ್ಕು ಸಮಿತಿಯ ಜೊತೆ ಅರಣ್ಯ ಇಲಾಖೆ ಸಮಯಕ್ಕೆ ಸರಿಯಾಗಿ ಸಭೆ / ಗ್ರಾಮ ಸಭೆ ನಡೆಸುತ್ತಿದೆಯೇ ;

(ಉ) ಅನಧಿಕೃತವಾಗಿ ಅರಣ್ಯ ಸಂಪತ್ತನ್ನು ನಾಶ ಮಾಡಿದವರ ವಿರುದ್ಧ ಇಲಾಖೆ ಎಷ್ಟು ಮೊಕದ್ದಮೆಗಳನ್ನು ದಾಖಲಿಸಿದೆ ? (ವಿವರ ನೀಡುವುದು)

## ಹೊಸ ತಾಲ್ಲೂಕಿನ ರಚನೆಯಲ್ಲಿ ಎಲ್ಲಾ ಪೂರಕ ಇಲಾಖೆಯ ಕಛೇರಿಯನ್ನು ಆರಂಭಿಸುವ ಕುರಿತು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೩೨೪೯ (೩೭೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರ ದಿನಾಂಕ ೦೬–೦೯–೨೦೧೭ ರಂದು ೪೯ ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದು ಇದರಲ್ಲಿ ಪೂರಕವಾಗಿ ಬೇಕಾಗಿರುವ ಮೂಲ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಸರ್ಕಾರ ವಿವಿಧ ಇಲಾಖೆಗಳ ಕಛೇರಿಯನ್ನು ಸಮಯಕ್ಕೆ ಸರಿಯಾಗಿ ಆರಂಭಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೊಸದಾಗಿ ಘೋಷಣೆಯಾದ ತಾಲ್ಲೂಕುಗಳಿಗೆ ಎಷ್ಟೆಷ್ಟು ಅನುದಾನವನ್ನು ಮೀಸಲಿಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ನಿಗದಿ ಮಾಡಿರುವ ಅನುದಾನದಲ್ಲಿ ಈಗಾಗಲೇ ಬಿಡುಗಡೆಗೊಳಿಸಲಾಗಿರುವ ಅನುದಾನದ ಮೊತ್ತ ಹಾಗೂ ಇನ್ನೂ ಬಿಡುಗಡೆ ಮಾಡಬೇಕಾಗಿರುವ ಮೊತ್ತವೆಷ್ಟು ;

(ಈ) ಈ ತಾಲ್ಲೂಕುಗಳು ನಿಗದಿಯಂತೆ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

## ಬಾಲ ಕಾರ್ಮಿಕ ಪದ್ಧತಿಯನ್ನು ತಡೆಯುವ ಕುರಿತು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು):–**

೩೨೪೦ (೩೭೩೦) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಲ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ೧೯೮೬ಕ್ಕೆ ೨೦೧೫ರಲ್ಲಿ ಆಗಿರುವ ತಿದ್ದುಪಡಿಯನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿ ಮಾಡುವ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು ;

(ಆ) ಮೇಲ್ಕಂಡ ತಿದ್ದುಪಡಿ ಅನ್ವಯ ೧೮ ವರ್ಷದವರೆಗಿನ ಮಕ್ಕಳನ್ನು ಯಾವುದೇ ಅಪಾಯಕಾರಿ ಉದ್ದಿಮೆಗಳಲ್ಲಿ ತೊಡಗಿಸಿಕೊಳ್ಳಬಾರದು ಎನ್ನುವ ಬಗ್ಗೆ ಸರ್ಕಾರ ಪ್ರಚಾರ ಕಾರ್ಯವನ್ನು ಕೈಗೊಂಡಿದೆಯೇ; (೨೦೧೫–೨೦೧೬ನೇ ಸಾಲಿನಲ್ಲಿರುವ ಬಾಲ ಕಾರ್ಮಿಕ ಸಂಖ್ಯೆಯನ್ನು (೬–೧೪ ಮತ್ತು ೧೪–೧೮ ವರ್ಷದ) ಪ್ರತ್ಯೇಕ ಜಿಲ್ಲಾವಾರು ವಿವರ ನೀಡುವುದು)

(ಇ) ಈ ಕಾಯ್ದೆಯನ್ನು ಜಾರಿ ಮಾಡಿದ್ದಲ್ಲಿ ಲಕ್ಷಾಂತರ ಮಕ್ಕಳು ದುಡಿಮೆಯ ಕೂಪದಿಂದ ಬಿಡಿಸಿಕೊಳ್ಳಲು ಸಾಧ್ಯವಾಗುವುದರಿಂದ ಸರ್ಕಾರ ಇದನ್ನು ತಕ್ಷಣ ಜಾರಿಗೊಳಿಸಲು ಕ್ರಮ ಕೈಗೊಳ್ಳುವುದೇ?

## ಗಲಿಗಲಿ-ಚಿಕ್ಕಗಲಗಲಿ ಮತ್ತು ಕೊರ್ತಿ ಕೊಲ್ಲಾರ ಸೇತುವೆ ಎತ್ತರಿಸುವ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-**

೩೨೪೧ (೩೬೯೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀಳಗಿ ತಾಲ್ಲೂಕಿನ ಗಲಗಲಿ-ಚಿಕ್ಕಗಲಗಲಿ ಮತ್ತು ಕೊರ್ತಿ-ಕೊಲ್ಲಾರ ಗ್ರಾಮಗಳ ಹತ್ತಿರ ಕೃಷ್ಣಾ ನದಿಗೆ ನಿರ್ಮಿಸಿರುವ ಹಳೇ ಸೇತುವೆಗಳನ್ನು ಎತ್ತರಿಸಿ ನೀರು ಸಂಗ್ರಹಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಹಾಗಿದ್ದರೆ, ಈ ಯೋಜನೆಯನ್ನು ಎಲ್ಲಿ, ಎಷ್ಟು ಎತ್ತರಕ್ಕೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಈ ಯೋಜನೆ ಜಾರಿಗೆ ತಗಲುವ ವೆಚ್ಚವೆಷ್ಟು ; ಈ ಯೋಜನೆಯನ್ನು ಪ್ರಾರಂಭಿಸಲಾಗುವುದು ಯಾವಾಗ ?

## ವಕೀಲರಿಗೆ ಇರುವ ಸೌಲಭ್ಯಗಳ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-**

೩೨೪೨ (೩೬೮೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಕೀಲರ ಸಂಘಗಳಿಗೆ ಕಾನೂನು ಇಲಾಖೆಯಿಂದ ಒದಗಿಸುವ ಸೌಲಭ್ಯಗಳು ಯಾವುವು; ಇಲ್ಲಿಯವರೆಗೆ ಒದಗಿಸಿದ ಸೌಲಭ್ಯಗಳೇನು; ವಾಯುವ್ಯ ಪದವೀಧರರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಕೀಲರ ಸಂಖ್ಯೆಗಳೆಷ್ಟು ; (ಮಾಹಿತಿ ನೀಡುವುದು)

(ಆ) ವಕೀಲರ ಸಂಘಗಳಿಗೆ ಮೂಲಭೂತ ಸೌಲಭ್ಯಗಳು ಹಾಗೂ ಕಾನೂನಾತ್ಮಕ ವಿಷಯಗಳನ್ನು ದಕ್ಷತೆಯಿಂದ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುವ ದೃಷ್ಟಿಯಿಂದ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ನ್ಯಾಯವಾದಿಗಳಿಗೆ ಇರುವ ಸೌಲಭ್ಯಗಳೇನು; ಕಳೆದ ೪ ವರ್ಷಗಳಲ್ಲಿ ವಾಯುವ್ಯ ಪದವೀಧರರ ಕ್ಷೇತ್ರದ ವ್ಯಾಪ್ತಿಯಲ್ಲಿ ಸೌಲಭ್ಯ ಪಡೆದ ನ್ಯಾಯವಾದಿಗಳೆಷ್ಟು ; (ಸಂಘವಾರು ವಿವರ ನೀಡುವುದು)

(ಈ) ತಾಲ್ಲೂಕು ವಕೀಲರ ಸಂಘ (ಬಾರ್ ಅಸೋಸಿಯೇಷನ್) ಗಳಿಗೆ ಇ–ಲೈಬ್ರರಿಗಳನ್ನು ಪ್ರಾರಂಭಿಸಬೇಕೆಂಬ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

## ಪದವೀಧರರ ನಿರುದ್ಯೋಗಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–**

೩೨೪೩ (೩೭೦೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ–ಬಾಗಲಕೋಟೆ–ವಿಜಯಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ನಿರುದ್ಯೋಗಿ ಪದವೀಧರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಈ ಜಿಲ್ಲೆಗಳ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ?

## ಕೌಶಲ್ಯ ಅಭಿವೃದ್ಧಿ ಯೋಜನೆಯ ಅನುದಾನದ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–**

೩೨೪೪ (೩೭೦೭) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೌಶಲ್ಯ ಅಭಿವೃದ್ಧಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು;

(ಆ) ಈ ಯೋಜನೆಯಿಂದ ನಿರುದ್ಯೋಗಿಗಳಿಗೆ ಅನುಕೂಲವಾಗಿದೆಯೇ; ಹಾಗಿದ್ದರೆ ಎಷ್ಟು ಜನ ನಿರುದ್ಯೋಗಿಗಳು ಇದರ ಉಪಯೋಗ ಪಡೆದಿದ್ದಾರೆ; (ತಿಳಿಸುವುದು)

(ಇ) ರಾಜ್ಯ ಸರ್ಕಾರ ಕೌಶಲ್ಯ ಅಭಿವೃದ್ಧಿ ಯೋಜನೆಗೆ ಮೀಸಲಿಟ್ಟ ಅನುದಾನವೆಷ್ಟು; ಸ್ವ–ಉದ್ಯೋಗಕ್ಕಾಗಿ ಈ ಯೋಜನೆಯಲ್ಲಿರುವ ಅವಕಾಶಗಳೇನು ; (ವಿವರ ನೀಡುವುದು)

(ಈ) ರಾಜ್ಯದಲ್ಲಿರುವ ನಿರುದ್ಯೋಗಿಗಳ ನಿರ್ದಿಷ್ಟ ಸಂಖ್ಯೆಯ ವಿವರವನ್ನು ಇಲಾಖೆ ಹೊಂದಿದೆಯೇ; ಹೊಂದಿದ್ದರೆ ಉದ್ಯೋಗವನ್ನು ಕಲ್ಪಿಸಲು ಇಲಾಖೆಯ ಮುಂದಿರುವ ಯೋಜನೆಗಳೇನು ? (ವಿವರ ನೀಡುವುದು)

## ವಸತಿ ಯೋಜನೆ TNO ಗಳನ್ನು ಮುಂದುವರಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೪೫ (೩೭೪೮) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ವಸತಿ ಯೋಜನೆಯಡಿ ಮನೆಗಳ ನಿರ್ಮಾಣದ ಪ್ರಗತಿಗೆ ಹೊಸದಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹೊಸದಾಗಿ ನೋಡಲ್ ಅಧಿಕಾರಿಗಳನ್ನು ನೇಮುಕ ಮಾಡುವುದರಿಂದ, ಈ ಹಿಂದೆ ಕಾರ್ಯನಿರ್ವಹಿಸುತ್ತಿರುವ ನೋಡಲ್ ಅಧಿಕಾರಿಗಳಿಗೆ ಸಮಸ್ಯೆ ಅಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ವಸತಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತ್ಯೇಕವಾಗಿ ನೇಮಕಗೊಂಡಿರುವ ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ ಸೇವಾ ಭದ್ರತೆಯನ್ನು ಒದಗಿಸುವ ಬಗ್ಗೆ ಯಾವ ನಿರ್ಣಯ ಕೈಗೊಳ್ಳಲಾಗಿದೆ; (ನಿರ್ಣಯಗಳ ಪ್ರತಿಯನ್ನು ಒದಗಿಸುವುದು)

(ಈ) ಪ್ರಸ್ತುತ ವಸತಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೋಡಲ್ ಅಧಿಕಾರಿಗಳಿಗೆ ಎಷ್ಟು ತಿಂಗಳಿನಿಂದ ವೇತನ ಬಿಡುಗಡೆಯಾಗಿರುವುದಿಲ್ಲ ; ಹೀಗೆ ವೇತನ ಬಿಡುಗಡೆಯಾಗದಿರಲು ಕಾರಣಗಳೇನು;

(ಉ) ಈ ಹಿಂದೆ ಕಾರ್ಯನಿರ್ವಹಿಸುತ್ತಿರುವ ನೋಡಲ್ ಅಧಿಕಾರಿಗಳನ್ನು ಮುಂದುವರಿಸಲು ಮತ್ತು ಬಾಕಿ ವೇತನ ಪಾವತಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೪೬ (೩೭೪೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಎಷ್ಟು ಹೆಕ್ಟೇರ್ ಕೃಷಿ ಭೂಮಿಯಲ್ಲಿ ಅರಣ್ಯವನ್ನು ಬೆಳೆಸಲಾಗಿದೆ;

(ಆ) ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಪ್ರತಿ ಜಿಲ್ಲೆಗೆ ನೀಡಲಾದ ಅನುದಾನ ಎಷ್ಟು ಮತ್ತು ಎಷ್ಟು ಕಾಮಗಾರಿಗಳನ್ನು ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಪ್ರತಿ ಫಲಾನುಭವಿಗಳಿಗೆ ಎಷ್ಟು ಹಣವನ್ನು ನೀಡಲಾಗುತ್ತಿದೆ; ಇಲ್ಲಿಯವರೆಗೆ ಎಷ್ಟು ಹಣವನ್ನು ಫಲಾನುಭವಿಗಳಿಗೆ ನೀಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

## CRZ ಕಾಯ್ದೆಗೆ ತಿದ್ದುಪಡಿ ವೇಳೆ ಸರಳೀಕರಣಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೪೭ (೩೭೫೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರಾವಳಿ ನಿಯಂತ್ರಣ ವಲಯ ಕಾಯಿದೆಯ ಅನುಷ್ಠಾನದಿಂದ ರಾಜ್ಯದ ಕರಾವಳಿ ತೀರ ಪ್ರದೇಶಗಳಿಗಾಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೇರಳ ಹಾಗೂ ಗೋವಾ ರಾಜ್ಯಗಳ ಮಾದರಿಯಲ್ಲಿಯೇ ನಮ್ಮ ರಾಜ್ಯಕ್ಕೂ CRZ ಕಾಯ್ದೆಯಿಂದ ಕೆಲವೊಂದು ವಿನಾಯಿತಿ ನೀಡುವ ಬಗ್ಗೆ ರಾಜ್ಯ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; ಕೇಂದ್ರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಮುಖ್ಯಾಂಶಗಳೇನು?

(ಇ) ಕರಾವಳಿಯ ಮೂಲ ನಿವಾಸಿಗಳಾದ ಮೀನುಗಾರರು ಸ್ಥಳೀಯರ ಮನೆ ನಿರ್ಮಾಣಕ್ಕೆ ತೊಂದರೆಯಾಗದಂತೆ, ಸುಗಮವಾಗಿ ಶೀಘ್ರದಲ್ಲಿ CRZ ನೀರಾಕ್ಷೇಪಣಾ ಪತ್ರ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಈ) ಕೇರಳ ಮತ್ತು ಗೋವಾ ರಾಜ್ಯಗಳ ಮಾದರಿಯಲ್ಲಿಯೇ ಕರಾವಳಿಯ ಪ್ರವಾಸೋದ್ಯಮಕ್ಕೆ CRZ ಕಾಯಿದೆಯಿಂದ ವಿನಾಯಿತಿಗೆ ಇಲಾಖೆಯು ಯಾವ ರೀತಿಯ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಸಲ್ಲಿಸಿದೆ; (ವಿವರ ನೀಡುವುದು)

(ಉ) ಕರಾವಳಿಯ ಜನರಹಿತ ಕಾಪಾಡಲು, CRZ ಕಾಯ್ದೆ ಸರಳೀಕರಣ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

**ಮೀನುಗಾರಿಕೆ ಮನೆ (ಮತ್ಸಾಶ್ರಯ) ಘಟಕ ವೆಚ್ಚ ಹೆಚ್ಚಳ ಕುರಿತು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೪೮ (೩೭೫೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳಾವುವು;

(ಆ) ಕಳೆದ ೪ ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಿಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು ;

(ಇ) "ಮತ್ಸಾಶ್ರಯ" ಮನೆಗಳ ಸಂಖ್ಯೆ ಹೆಚ್ಚಳ ಮತ್ತು ಘಟಕ ವೆಚ್ಚದ ಹೆಚ್ಚಳಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರಾಜ್ಯದಲ್ಲಿರುವ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೪೯ (೩೫೨೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ೧೪೦೦ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಆರಂಭಿಸಲಾಗಿದೆಯೇ;

(ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ವೆಚ್ಚ ಮಾಡಲಾಗಿರುವ ಹಣವೆಷ್ಟು ;

(ಇ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಕೆರೆಗಳನ್ನು ನೀರು ತುಂಬಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಈ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಕೆರೆಗಳನ್ನು ನೀರು ತುಂಬಿಸಲು ಆಯ್ಕೆ ಮಾಡಲಾಗಿದೆ ; ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ; (ತಾಲ್ಲೂಕುವಾರು ಕೆರೆಗಳ ಹೆಸರನ್ನು ಮತ್ತು ಈ ಕೆರೆಗಳಿಗೆ ಒದಗಿಸಿರುವ ಅನುದಾನದ ಬಗ್ಗೆ ಮಾಹಿತಿ ನೀಡುವುದು)

(ಉ) ನೀರು ತುಂಬಿಸಿರುವ ಕೆರೆಗಳಿಗೆ ಖರ್ಚು ಮಾಡಿರುವ ಹಣವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಊ) ಒಟ್ಟಾರೆಯಾಗಿ ರಾಜ್ಯದಲ್ಲಿ ಎಷ್ಟು ಕೆರೆಗಳಿಗೆ ಈಗಾಗಲೇ ನೀರು ತುಂಬಿಸಿ ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಋ) ಉಳಿದ ಕೆರೆಗಳಿಗೆ ನೀರನ್ನು ತುಂಬಿಸಲಾಗುವುದು ಯಾವಾಗ?

## ಜಿಲ್ಲಾಧಿಕಾರಿಗಳ ಉಪವಿಭಾಗಧಿಕಾರಿಗಳ ಹಾಗೂ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೫೦ (೩೫೨೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ೩೦ ಜಿಲ್ಲೆಗಳಲ್ಲಿನ ೩೦ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಎಲ್ಲಾ ಪ್ರಕರಣಗಳು ಸೇರಿದಂತೆ ವಿಚಾರಣೆ ಹಂತದಲ್ಲಿರುವ ಕೇಸ್‌ಗಳ ಸಂಖ್ಯೆ ಎಷ್ಟು ; ಮತ್ತು ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳೆಷ್ಟು; ಈ ಪ್ರಕರಣಗಳಲ್ಲಿ ಒಂದು ವರ್ಷದ ಮೇಲ್ಪಟ್ಟ ಮತ್ತು ಐದು ವರ್ಷದೊಳಗಿರುವ ಹಾಗೂ ಐದು ವರ್ಷಗಳಿಗೂ ಮೀರಿದ ಪ್ರಕರಣಗಳೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿರುವ ಕಂದಾಯ ಇಲಾಖೆ ಉಪ ವಿಭಾಗಾಧಿಕಾರಿಗಳ ಸಂಖ್ಯೆ ಎಷ್ಟು ; ಹಾಗೂ ಇವರ ನ್ಯಾಯಾಲಯದಲ್ಲಿ ಎಲ್ಲಾ ಪ್ರಕರಣಗಳು ಸೇರಿದಂತೆ ವಿಚಾರಣೆ ಹಂತದಲ್ಲಿರುವ ಕೇಸ್‌ಗಳ ಸಂಖ್ಯೆ ಎಷ್ಟು ; ಮತ್ತು ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಒಂದು ವರ್ಷದ ಮೇಲ್ಪಟ್ಟ ಮತ್ತು ಐದು ವರ್ಷಗಳಿಗೂ ಒಳಗಿರುವ ಹಾಗೂ ಐದು ವರ್ಷಗಳಿಗೂ ಮೀರಿದ ಪ್ರಕರಣಗಳೆಷ್ಟು ; ಪ್ರತಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಾವಾರು ಸಂಪೂರ್ಣ ಮಾಹಿತಿ ನೀಡುವುದು ;

(ಈ) ಅದೇ ರೀತಿಯಾಗಿ ರಾಜ್ಯದಲ್ಲಿರುವ ತಾಲ್ಲೂಕು ತಹಶೀಲ್ದಾರ್ ನ್ಯಾಯಾಲಯದಲ್ಲಿ ಎಲ್ಲಾ ಪ್ರಕರಣಗಳು ಸೇರಿದಂತೆ ವಿಚಾರಣೆ

ಹಂತದಲ್ಲಿರುವ ಕೇಸ್‌ಗಳ ಸಂಖ್ಯೆ ಎಷ್ಟು; ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳೆಷ್ಟು ; ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಉ) ಈ ಪ್ರಕರಣಗಳಲ್ಲಿ ಒಂದು ವರ್ಷದ ಮೇಲ್ಪಟ್ಟ ಮತ್ತು ಐದು ವರ್ಷಗಳಿಗೂ ಒಳಗಿರುವ ಹಾಗೂ ಐದು ವರ್ಷಗಳಿಗೂ ಮೀರಿದ ಪ್ರಕರಣಗಳೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಊ) ಇಷ್ಟು ವರ್ಷಗಳು ಕಳೆದರೂ ಸಾರ್ವಜನಿಕರ / ರೈತರ ದಾವೆಗಳನ್ನು ಇತ್ಯರ್ಥ ಪಡಿಸಲು ಏಕೆ ಸಾಧ್ಯವಾಗುತ್ತಿಲ್ಲ; ಈ ಪ್ರಕರಣಗಳನ್ನು ಒಂದು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಸರ್ಕಾರ ಕ್ರಮ ವಹಿಸುವುದೆ ? (ತಿಳಿಸುವುದು)

## ರಾಜ್ಯದಲ್ಲಿರುವ ಕೆರೆ ಮತ್ತು ಸರೋವರಗಳ ರಕ್ಷಣೆಯ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) : –**

೩೨೫೧ (೩೫೨೪) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕೆರೆ ಮತ್ತು ಸರೋವರಗಳ ರಕ್ಷಣೆಗೆ ಹಾಗೂ ಅಭಿವೃದ್ಧಿಗಾಗಿ ಕರ್ನಾಟಕದಲ್ಲಿರುವ ಸರೋವರ ಮತ್ತು ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಲಾಗಿದೆಯೇ ;

(ಆ) ಕೆರೆಗಳ ಸಂರಕ್ಷಣೆ ಮತ್ತು ಪುನರ್‌ಜೀವನಕ್ಕೆ ಕಳೆದ ಎರಡು ವರ್ಷದಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಿರುವ ಅನುದಾನವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಹಂಚಿಕೆ ಮಾಡಿರುವ ಅನುದಾನದಲ್ಲಿ ಎಷ್ಟು ಕೆರೆಗಳ ಸಂರಕ್ಷಣೆ ಮಾಡಿ, ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಈ) ಈ ಯೋಜನೆಗೆ ೨೦೧೭–೧೮ ನೇ ಸಾಲಿನಲ್ಲಿ ನೀಡಿರುವ ಅನುದಾನವೆಷ್ಟು ; ಈ ಬಗ್ಗೆ ಜಿಲ್ಲಾವಾರು ಹಂಚಿಕೆ ಮಾಡಿರುವ ಪಟ್ಟಿ ನೀಡುವುದು ?

## ಬರ ಪರಿಹಾರಕ್ಕಾಗಿ ಬಿಡುಗಡೆಯಾಗಿರುವ ಅನುದಾನ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳಿಯ ಸಂಸ್ಥೆಗಳ ಕ್ಷೇತ್ರ):–**

೩೨೫೨ (೩೫೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ತಲೆದೋರಿರುವ ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ಕಳೆದ ೩ ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು) ಈ ಅನುದಾನವನ್ನು ಸಂಪೂರ್ಣ ರೈತರಿಗೆ ವಿತರಣೆ ಮಾಡಲಾಗಿದೆಯೇ ;

(ಆ) ವಿತರಣೆ ಮಾಡಿದ್ದಲ್ಲಿ, ರಾಜ್ಯದ ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಅನುದಾನವನ್ನು ವಿತರಣೆ ಮಾಡಲಾಗಿದೆ ಎಂಬುದರ ಬಗ್ಗೆ ಜಿಲ್ಲಾವಾರು ವಿವರ ನೀಡುವುದು ;

(ಇ) ಈ ಅನುದಾನದಲ್ಲಿ ರಾಜ್ಯದಲ್ಲಿ ಕೈಗೊಂಡಿರುವ ಇತರೆ ಕಾಮಗಾರಿಗಳು ಯಾವುವು ; ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಬರ ಪರಿಹಾರಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡಿರುವ ಅನುದಾನ ಎಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿ ಪರಿಭಾವಿತ ಅರಣ್ಯ ಪ್ರದೇಶಗಳ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೫೩ (೩೫೨೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಪರಿಭಾವಿತ ಅರಣ್ಯ ಪ್ರದೇಶಗಳನ್ನು (Deemed Forest) ಅರಣ್ಯ ವ್ಯಾಪ್ತಿಯಿಂದ ಹೊರಗಿಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ;

(ಆ) ಹಾಗಿದ್ದಲ್ಲಿ, ಆಯಾ ಜಿಲ್ಲೆಗಳ Deemed Forest ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಲಾಗುವುದೇ ; (ವಿವರ ನೀಡುವುದು)

(ಇ) ಇಂತಹ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಮನೆಗಳನ್ನು ನಿರ್ಮಿಸಿಕೊಂಡಿರುವವರ ಸಂಖ್ಯೆ ಎಷ್ಟು ; ಇದರ ಒಟ್ಟು ವಿಸ್ತೀರ್ಣವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ತುಮಕೂರು ಜಿಲ್ಲೆಯಲ್ಲಿ ಈ ರೀತಿಯ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿರುವವರ ಸಂಖ್ಯೆ ಎಷ್ಟು ; ಎಷ್ಟು ವರ್ಷಗಳಿಂದ ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದಾರೆ ; ಇದರ ಒಟ್ಟು ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಎಷ್ಟು ದಿವಸಗಳಲ್ಲಿ ಅಂತಹ ಪ್ರದೇಶಗಳಲ್ಲಿನ ಮನೆಗಳನ್ನು ಸಕ್ರಮಗೊಳಿಸಲಾಗುವುದು ?

## ರಾಜ್ಯದ ಸಣ್ಣ ಹಿಡುವಳಿದಾರರಿಗೆ ಎಸ್.ಸಿ.ಪಿ / ಟಿ.ಎಸ್.ಪಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸಲು ಕೊಳವೆ ಬಾವಿ ಕೊರೆಸುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೫೪ (೩೬೮೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಣ್ಣ ನೀರಾವರಿ ಇಲಾಖೆಯಿಂದ ಎಸ್‌ಸಿಪಿ /ಟಿಎಸ್‌ಪಿ ಯೋಜನೆಯಡಿ ಸಣ್ಣ ಹಿಡುವಳಿದಾರರಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕೊಳವೆಬಾವಿ ಕೊರೆಯಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ೨೦೧೪–೧೫, ೨೦೧೫–೧೬, ೨೦೧೬–೧೭ ನೇ ಸಾಲಿನ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಫಲಾನುಭವಿಗಳ ವಿವರ ನೀಡುವುದು)

(ಇ) ಬೆಳಗಾವಿ ಜಿಲ್ಲೆಯಲ್ಲಿ ೨೦೧೫–೧೬, ೨೦೧೬–೧೭ನೇ ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಬಂದ ಅರ್ಜಿಗಳು ಎಷ್ಟು ; ಅವುಗಳಲ್ಲಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ತಿರಸ್ಕರಿಸಿದ ಅರ್ಜಿಗಳೆಷ್ಟು ; (ತಾಲ್ಲೂಕುವಾರು ಫಲಾನುಭವಿಗಳ ಹೆಸರು ಸಹಿತ ವಿವರಣೆ ನೀಡುವುದು)

(ಈ) ಈ ಯೋಜನೆಯಡಿ ಜಿಲ್ಲೆಗೆ ೨೦೧೫–೧೬, ೨೦೧೬–೧೭ ನೇ ಸಾಲಿನ ಕೊಳವೆಬಾವಿ ಕೊರೆಯಲು ಸರ್ಕಾರವು ನೀಡಿದ ಅನುದಾನವೆಷ್ಟು ; ಅದರಲ್ಲಿ ಬಳಕೆಯಾದ ಅನುದಾನವೆಷ್ಟು ; ಬಾಕಿ ಉಳಿದ ಅನುದಾನವೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಳಕೆಯಾಗದೆ ಅನುದಾನ ಉಳಿಕೆಯಾಗಲು ಕಾರಣರಾದ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುವುದು ?

## ಪ.ಜಾತಿ ಮತ್ತು ಪ.ಪಂಗಡದ ಕ್ರೀಡಾ ಪಟುಗಳಿಗೆ ಕ್ರೀಡಾ ತರಬೇತಿ ಹಾಗೂ ವೃತಿ ಕೌಶಲ್ಯ ತರಬೇತಿಗೆ ಕಾಯ್ದಿರಿಸಿದ ಅನುದಾನ ದುರ್ಬಳಕೆ / ಅಕ್ರಮದ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೫೫ (೩೬೮೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾ ಪಟುಗಳಿಗೆ ಸಾಹಸ ಕ್ರೀಡಾ ತರಬೇತಿ ಹಾಗೂ ವೃತಿ ಕೌಶಲ್ಯ ತರಬೇತಿಗೆ ಕಾಯ್ದಿರಿಸಿದ ಅನುದಾನದ ಬಳಕೆಯಲ್ಲಿ ಅಕ್ರಮ ನಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ೨೦೧೪–೧೫, ೨೦೧೫–೧೬ ಹಾಗೂ ೨೦೧೬–೧೭ ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾಹಸ ಕ್ರೀಡಾ ಪಟುಗಳಿಗೆ ತರಬೇತಿಗೆ ಕಾಯ್ದಿರಿಸಲಾಗಿದ್ದ ಅನುದಾನವೆಷ್ಟು ;

(ಇ) ೨೦೧೪–೧೫, ೨೦೧೫–೧೬ ಹಾಗೂ ೨೦೧೬–೧೭ನೇ ಸಾಲಿನಲ್ಲಿ ಈ ಯೋಜನೆಯಡಿ ತರಬೇತಿಗೆ ಆಯ್ಕೆಯಾದ ಕ್ರೀಡಾ ಪಟುಗಳು ಯಾರ್ಯಾರು : (ವಿವರ ನೀಡುವುದು)

(ಈ) ಪ್ರತಿ ಕ್ರೀಡಾಪಟುವಿಗೆ ತರಬೇತಿ ನೀಡಲು ಪ್ರತಿದಿನ ಬಳಕೆ ಮಾಡಲು ನಿಗಧಿಪಡಿಸಿದ ಅನುದಾನವೆಷ್ಟು ? (ವಿವರ ನೀಡುವುದು)

## ರೈತರು ಜಮೀನು ಬೀಳುಬಿಟ್ಟಿದ್ದರೆ, ಅದನ್ನು ಸರ್ಕಾರ ವಶಪಡಿಸಿಕೊಳ್ಳಲು ಮುಂದಾಗಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೩೨೫೬ (೩೬೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆರ್ಥಿಕ ಸಂಕಷ್ಟ ಮತ್ತಿತರ ಕಾರಣಗಳಿಂದ ಕೃಷಿ ಮಾಡಲಾಗದೆ ಸತತ ಜಮೀನು ಬೀಳು ಬಿಟ್ಟಿದ್ದರೆ, ಅಂತಹ ಜಮೀನನ್ನು ವಶಕ್ಕೆ ಪಡೆಯಲು ಸರ್ಕಾರ ಮುಂದಾಗಿರುವುದು ನಿಜವೇ ;

(ಆ) ವಶಕ್ಕೆ ಪಡೆದ ಜಮೀನಿನಲ್ಲಿ ಮತ್ತೆ ಕೃಷಿ ಚಟುವಟಿಕೆ ನಡೆಸಲು ಯಾವ ರೀತಿಯ ಕ್ರಮ ಕೈಗೊಳ್ಳಲು ಸರ್ಕಾರ ಚಿಂತನೆ ನಡೆಸುವುದು; (ಸದರಿ ಕಾಯಿದೆಯ ಸಂಪೂರ್ಣ ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿನ ಎಷ್ಟು ಜನ ರೈತರಿಗೆ ಜಮೀನು ವಶಕ್ಕೆ ಪಡೆಯಲು ನೋಟೀಸ್ ನೀಡಲಾಗಿದೆ ; ಹಾಗೂ ಎಷ್ಟು ಜಮೀನುಗಳನ್ನು ವಶಕ್ಕೆ ಪಡೆಯಲಾಗಿದೆ;

(ಈ) ಸತತ ಎರಡು ಮೂರು ವರ್ಷಗಳಿಂದ ಬರಪೀಡಿತ ಪ್ರದೇಶವೆಂದು ಘೋಷಿತವಾಗಿರುವ ತಾಲ್ಲೂಕುಗಳಿಗೂ ಇದು ಅನ್ವಯಿಸುವುದೇ? (ವಿವರ ನೀಡುವುದು)

## ಬೆಳಗಾವಿ ಜಿಲ್ಲೆಯ ನೂರಾರು ಗ್ರಾಮಗಳಲ್ಲಿ ಶವ ಸಂಸ್ಕಾರಕ್ಕೆ ಸ್ಮಶಾನ ಭೂಮಿ ಇಲ್ಲದೆ ಇರುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೨೫೭ (೩೬೯೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಸುಮಾರು ೫೦೦ಕ್ಕೂ ಹೆಚ್ಚು ಗ್ರಾಮಗಳಲ್ಲಿ ಶವ ಸಂಸ್ಕಾರ ಮಾಡಲು ಸ್ಮಶಾನಕ್ಕೆ ಭೂಮಿ ಇಲ್ಲದೆ ಇರುವುದರಿಂದ, ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸ್ಮಶಾನಕ್ಕೆ ಭೂಮಿ ಇಲ್ಲದಿರುವ ಗ್ರಾಮಗಳಲ್ಲಿ ಭೂಮಿ ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ; ಜಿಲ್ಲೆಯಲ್ಲಿ ಸ್ಮಶಾನ ಭೂಮಿಗಳು ಇಲ್ಲದಿರುವ ಗ್ರಾಮಗಳು ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಯಾವ ಕಾಲಮಿತಿಗಳಲ್ಲಿ ಸ್ಮಶಾನ ಭೂಮಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ?

## ಬೆಳಗಾವಿ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಬೂತ್‌ಗಳ ಸಂಖ್ಯೆ ಬಗ್ಗೆ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)(ನಾಮನಿರ್ದೇಶನ ಹೊಂದಿದವರು):–**

೩೨೫೮ (೩೭೨೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಚುನಾವಣೆ ಬೂತ್‌ಗಳ ಸಂಖ್ಯೆ ಎಷ್ಟು ; ಅವು ಯಾವುವು ; (ಪೂರ್ಣ ವಿವರ ನೀಡುವುದು)

(ಆ) ಪ್ರಸಕ್ತ ಹೊಸದಾಗಿ ಬೂತ್ ಮಾಡುವಂತೆ ಜನರಿಂದ ಬಂದ ಅರ್ಜಿ ಎಷ್ಟು ;

(ಇ) ಬೂತ್‌ನ್ನು ಹೊಸದಾಗಿ ನೀಡಲು ಇರುವ ಮಾನದಂಡಗಳೇನು;

(ಈ) ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆಯೆ; ಅವು ಯಾವುವು ? (ವಿವರ ನೀಡುವುದು)

## ದೇವರ ದಾಸಿಮಯ್ಯ ಕೂಲಿ ನೇಕಾರರ ಸಂಘಕ್ಕೆ ನಿವೇಶನ ಹಂಚಿಕೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೩೨೫೯ (೩೭೨೩) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಶ್ರೀ ದೇವರ ದಾಸಿಮಯ್ಯ ಕೂಲಿ ನೇಕಾರರ ಸಂಘವು ಸದಸ್ಯರಿಗೆ ೫೦೦ ನಿವೇಶನ ಹಂಚಿಕೆ ಮಾಡಲು ೪೦ ಎಕರೆ ಸರ್ಕಾರಿ ಭೂಮಿ ಕೋರಿ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕ್ರ:ಮನಬೆ:ಸಾಆವಿ. ವಾಜಪೇಯಿ ಸಿ.ಆರ್. ೨೦೧೪–೧೫/೨೯೧ ದಿನಾಂಕ: ೦೯–೦೨–೨೦೧೫ ಪತ್ರ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಸತಿ ಸಚಿವರು ಆದೇಶ ಮಾಡಿದ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

(ಇ) ಬಡ ಕೂಲಿ ಕಾರ್ಮಿಕ ನೇಕಾರರಿಗೆ ಮೂಲಭೂತ ಸೌಕರ್ಯ ಒದಗಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೆ?

## ದೇವರದಾಸಿಮಯ್ಯ ನೇಕಾರರ ಸಂಘದ ಸದಸ್ಯರಿಗೆ ನಿವೇಶನ ಹಂಚುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೩೨೬೦ (೩೭೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ತಾಲ್ಲೂಕು, ಬೆಳಗಾವಿ ಹೋಬಳಿ, ಯಳ್ಳೂರು ಗ್ರಾಮದ ಸರ್ವೆ ನಂ. ೧೧೪೨ರಲ್ಲಿ ಬರುವ ಜಮೀನು ಎಷ್ಟು;

(ಆ) ಈ ಜಾಗವನ್ನು ಯಾರ್ಯಾರಿಗೆ ಹಂಚಿಕೆ ಮಾಡಲಾಗಿದೆ; ಹಾಲಿ ಇರುವ ಜಾಗದ ಬಗ್ಗೆ ಪೂರ್ಣ ವಿವರ ನೀಡುವುದು;

(ಇ) ಕಳೆದ ೨ ವರ್ಷಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಸತಿ ಸಚಿವರು ಈ ಜಾಗವನ್ನು ಶ್ರೀ ದೇವರ ದಾಸಿಮಯ್ಯ ನೇಕಾರರ ಸಂಘದ ೫೦೦ ಸದಸ್ಯರಿಗೆ ನಿವೇಶನಕ್ಕಾಗಿ ಹಸ್ತಾಂತರ ಮಾಡಲು ಆದೇಶ ಮಾಡಿದ್ದರೂ ಇರುವರೆಗೆ ತೆಗೆದುಕೊಂಡ ಕ್ರಮಗಳೇನು;

(ಈ) ಹಾಗಿದ್ದಲ್ಲಿ, ಈ ಜಾಗವನ್ನು ಮೇಲ್ಕಂಡ ಸಂಘಕ್ಕೆ ನೀಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೆ?

## ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಮತದಾರರ ಸಂಖ್ಯೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೩೨೬೧ (೩೭೭೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮತದಾರರ ಸಂಖ್ಯೆ ಎಷು; (ಪೂರ್ಣ ಪಟ್ಟಿಯ ವಿವರ ನೀಡುವುದು)

(ಆ) ಹೊಸದಾಗಿ ಮತದಾರರನ್ನು ಸೇರಿಸಲು ಇರುವ ಮಾನದಂಡಗಳೇನು;

(ಇ) ಪ್ರಸಕ್ತ ಸಾಲಿನ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಲಾಗಿದೆಯೇ;

(ಈ) ೨೦೧೮ರ ಚುನಾವಣೆಗೆ ಮತದಾರರನ್ನು ಪಟ್ಟಿಗೆ ಸೇರಿಸಲು ಕೊನೆಯ ದಿನಾಂಕ ಯಾವುದು? (ವಿವರ ನೀಡುವುದು)

## ಬಡನೇಕಾರರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೩೨೬೨ (೩೭೨೧) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚು ಹಿಂದುಳಿದ ಹಾಗೂ ಬಡ ನೇಕಾರರು ವೃತ್ತಿ ಮಾಡುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;

(ಆ) ಹಾಗಿದ್ದಲ್ಲಿ, ಕಳೆದ ೫ ವರ್ಷಗಳಲ್ಲಿ ಹಾಕಿಕೊಂಡಿರುವ ಕೌಶಲ್ಯ ಅಭಿವೃದ್ಧಿ ಹಾಗೂ ಉದ್ಯಮ ಶೀಲತೆ ಮತ್ತು ಜೀವನೋಪಾಯ ಕಾರ್ಯಕ್ರಮಗಳಾವುವು;

(ಇ) ಈ ಕ್ಷೇತ್ರದ ಜನರಿಗೆ ತಿಳುವಳಿಕೆ ನೀಡಲು ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ನೀಡುವುದು;

(ಈ) ಪ್ರಸಕ್ತ ಸಾಲಿನಲ್ಲಿ ಬಹಳಷ್ಟು ನೇಕಾರರು ಇರುವ ಈ ಕ್ಷೇತ್ರದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಸರ್ಕಾರದ ಕೌಶಲ್ಯ ತರಬೇತಿಯ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೬೩ (೩೫೦೧) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಿರುದ್ಯೋಗಿ ಯುವಕರಿಗೆ ತಾವು ಇಚ್ಛಿಸುವ ವೃತ್ತಿಯಲ್ಲಿ ತರಬೇತಿ ಹೊಂದಲು ಸರ್ಕಾರ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದು, ಇಲ್ಲಿಯವರೆಗೆ ಎಷ್ಟು ಅರ್ಜಿಗಳು ಬಂದಿವೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಕೌಶಲ್ಯ ತರಬೇತಿಗೆ ಇರುವ ಮಾನದಂಡಗಳೇನು;

(ಇ) ಈ ಕಾರ್ಯಕ್ರಮದಲ್ಲಿ ಯಾವ ಯಾವ ಕೌಶಲ್ಯಗಳ ಬಗ್ಗೆ ತರಬೇತಿ ನೀಡಲಾಗುವುದು; (ವಿವರ ನೀಡುವುದು)

(ಈ) ಕೌಶಲ್ಯ ತರಬೇತಿ ಹೊಂದಿದವರಿಗೆ ಸ್ವಯಂ ಉದ್ಯೋಗ ಪಡೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ವಿವರ ನೀಡುವುದು)

## ಯುವ ಸಬಲೀಕರಣಕ್ಕಾಗಿ ಹಾಕಿಕೊಂಡ ಕಾರ್ಯಕ್ರಮಗಳು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೬೪ (೩೪೯೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯುವ ಸಬಲೀಕರಣಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳೇನು; ಇದಕ್ಕಾಗಿ ಖರ್ಚು ಮಾಡಲಾಗಿರುವ ಹಣ ಎಷ್ಟು; ಎಷ್ಟು ಯುವಕರಿಗೆ ಇದರಿಂದ ಪ್ರಯೋಜನವಾಗಿದೆ;

(ಆ) ಕ್ರೀಡೆಗಳಲ್ಲಿ ಯುವಜನರನ್ನು ತೊಡಗಿಸಲು ಯಾವ ರೀತಿಯ ಕ್ರೀಡಾ ತರಬೇತಿಗಳನ್ನು ನೀಡಲಾಗಿದೆ; ತರಬೇತಿ ಶಿಬಿರಗಳನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ಆಯೋಜಿಸಲಾಗಿತ್ತು? (ಕಳೆದ ೨ ವರ್ಷಗಳ ವಿವರ ನೀಡುವುದು)

## Land acquisition under LA act in favour of Bank officers and officials house building co-operation society, Bengaluru

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೬೫ (೩೭೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) Amount of Award (total) of the Land acquired under LA Act in favour of Bank Officers and Officials house building co-operation, Society Bengaluru in Yelachenahally and Jaraganahally villages, Uttarahally hobli, Bengaluru South Tq. Provide the information regarding Date of notification under section 4(1) and 6(1) with total extent: Date of Award passed.

(ಆ) Whether land owners have received the award amount, If so details, such as name of the land owner, Sy. No. Extent Award amount, date of payment etc may be given.

(ಇ) If award amount not received by the land owners whether the amount still with SLAO of deposited in the treasury court ? (details may be given)

## ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿಯನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೬೬ (೩೭೪೫) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು; ಆ ಪೈಕಿ ಎಷ್ಟು ಕೇಂದ್ರದ ಸಿಬ್ಬಂದಿಯನ್ನು ಅನುದಾನಕ್ಕೆ ಒಳಪಡಿಸಲಾಗಿದೆ;

(ಆ) ಶ್ರೀ ಪಿ.ಎಸ್.ಎಸ್. ಥಾಮಸ್ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ಯಾವಾಗ; ಸಮಿತಿಯ ಮುಖ್ಯ ಶಿಫಾರಸ್ಸುಗಳೇನು;

(ಇ) ಸದರಿ ಸಮಿತಿಯು ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಬಿಡುಗಡೆ ಶಿಫಾರಸ್ಸು ಮಾಡಿದೆಯೇ;

(ಈ) ಸರ್ಕಾರ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಬಿಡುಗಡೆ ಮಾಡುವಂತೆ ಯಾವಾಗ ಆದೇಶ ಹೊರಡಿಸಿದೆ; ಈ ಆದೇಶದಿಂದ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಶಿಕ್ಷಣವು ಅಸ್ತವ್ಯಸ್ತವಾಗುವುದಿಲ್ಲವೆ?

## ವಸತಿ ಯೋಜನೆಯ ಫಲಾನುಭವಿಗಳ ಆಧಾರ್ ಲಿಂಕ್ ಮಾಡುವ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೬೭ (೩೭೪೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮೀಣ ವಸತಿ ಯೋಜನೆಯಲ್ಲಿ ಫಲಾನುಭವಿಗಳ ಪುನರಾವರ್ತನೆ ತಡೆಯುವ ಸಲುವಾಗಿ ಫಲಾನುಭವಿಗಳ ಆಧಾರ್ ಲಿಂಕ್ ಮಾಡಲಾಗುತ್ತಿದೆಯೇ;

(ಆ) ಹಾಗಿದ್ದರೆ, ಪ್ರಸ್ತುತ ವಸತಿ ಯೋಜನೆಯಲ್ಲಿ ಫಲಾನುಭವಿಗಳ ಆಧಾರ್ ಲಿಂಕ್ ಕಾರ್ಯ ಯಾವ ಹಂತದಲ್ಲಿದೆ; (ಶೇಕಡಾವಾರು ಪ್ರಗತಿ ಒದಗಿಸುವುದು)

(ಇ) ಫಲಾನುಭವಿಗಳು ಪುನರಾವರ್ತನೆಯಾಗಿರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಫಲಾನುಭವಿಗಳ ಪುನರಾವರ್ತನೆಯಿಂದ ಸರ್ಕಾರಕ್ಕೆ ಉಂಟಾದ ನಷ್ಟವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

## ನೂತನ ಕ್ರೀಡಾಂಗಣಗಳ ನಿರ್ಮಾಣದ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೬೮ (೩೭೮೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಯಾವುದಾದರೂ ನೂತನ ಕ್ರೀಡಾಂಗಣವನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಇದ್ದರೆ ಯಾವ ಯಾವ ತಾಲ್ಲೂಕಿನಲ್ಲಿ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ;

(ಆ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಕ್ರೀಡಾಂಣಗಳನ್ನು ಅಭಿವೃದ್ಧಿ ಪಡಿಸಲಾಗಿದೆ; ಇದಕ್ಕಾಗಿ ವಿನಿಯೋಗಿಸಿರುವ ಅನುದಾನ ವೆಷ್ಟು;

(ಇ) ಯಲಹಂಕ ವಿಧಾನ ಸಭಾ ಕ್ಷೇತ್ರದಲ್ಲಿ ೨೦೧೭–೧೮ನೇ ಸಾಲಿನಲ್ಲಿ ಯುವ ಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಸರ್ಕಾರ ಚಿಂತಿಸಿದೆ; ಇದಕ್ಕಾಗಿ ವಿನಿಯೋಗಿಸಿರುವ ಅನುದಾನವೆಷ್ಟು; ಕಾಮಗಾರಿಯು ಪ್ರಾರಂಭಗೊಂಡಿದೆಯೇ; ಇದ್ದರೆ ಯಾವ ಹಂತದಲ್ಲಿದೆ;

(ಈ) ಕ್ರೀಡಾ ತರಬೇತುದಾರರೂ ಹಾಗೂ ಇನ್ನಿತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳಿಗೆ ಶೀಘ್ರದಲ್ಲಿ ನೇಮಕ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?

## ಐ.ಟಿ.ಐ. ಕಾಲೇಜುಗಳ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೯ (೩೭೮೬) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಐ.ಟಿ.ಐ. ಕಾಲೇಜುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸರ್ಕಾರ ನೂತನವಾಗಿ ಸರ್ಕಾರಿ ಐ.ಟಿ.ಐ. ಕಾಲೇಜ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದರೆ, ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಲಾಗುವುದು; (ಜಿಲ್ಲಾವಾರು ಮಾಹಿತಿ ತಿಳಿಸುವುದು)

(ಇ) ಈ ಐ.ಟಿ.ಐ. ಕಾಲೇಜುಗಳಿಗೆ ಕಳೆದ ೩ ವರ್ಷಗಳಲ್ಲಿ ಸರ್ಕಾರ ನೀಡಿರುವ ಅನುದಾನ ಮೊತ್ತವೆಷ್ಟು; ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಸರ್ಕಾರ ನೀಡಿರುವ ಅನುದಾನದಲ್ಲಿ ಐ.ಟಿ.ಐ. ಕಾಲೇಜುಗಳಲ್ಲಿ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ;

(ಉ) ಸರ್ಕಾರದ ಐ.ಟಿ.ಐ. ಕಾಲೇಜುಗಳು ಸ್ವಂತ ಕಟ್ಟಡಗಳನ್ನು ಹೊಂದಿದೆಯೆ ಅಥವಾ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆಯೇ;

## ಮನೆಗಳ ಹಂಚಿಕೆಯ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೭೦ (೩೭೮೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಳೆದ ೩ ವರ್ಷಗಳಲ್ಲಿ ಹಂಚಿಕೆ ಮಾಡಿರುವ ಮನೆಗಳೆಷ್ಟು;

(ಆ) ಮನೆ ನಿರ್ಮಾಣ ಮಾಡಲು ಯಾವ ಯಾವ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಸರ್ಕಾರ ನೀಡುವ ಅನುದಾನವೆಷ್ಟು;

(ಇ) ಕಳೆದ ೩ ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಯಾವ ಯಾವ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಅನುದಾನ ನೀಡಿದೆ?

## ರಾಷ್ಟ್ರೀಯ ಸ್ವಾಸ್ತ್ಯ ಭೀಮಾ ಯೋಜನೆಯ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೭೧ (೩೭೨೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿಪಿಎಲ್ ಕುಟುಂಬಕ್ಕೆ ಸೇರಿದ ಕಾರ್ಮಿಕರಿಗೆ ರಾಷ್ಟ್ರೀಯ ಸ್ವಾಸ್ತ್ಯ ಭೀಮಾ ಯೋಜನಾ ಅಡಿಯಲ್ಲಿ ಸ್ಮಾರ್ಟ್ ಕಾರ್ಡ್ ನೀಡುತ್ತಿರುವುದು ನಿಜವೇ;

(ಆ) ಹಾಗಿದ್ದರೆ, ಈ ಯೋಜನೆಯ ವಿವರ ನೀಡುವುದು; ಖಾಸಗಿ ಆಸ್ಪತ್ರೆಗಳು ಈ ಯೋಜನೆಗೆ ಸ್ಪಂದಿಸುತ್ತಿವೆಯೇ;

(ಇ) ಯೋಜನೆ ಪ್ರಾರಂಭವಾದಗಿನಿಂದ ಎಷ್ಟು ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ; ಈ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನದ ಪಾಲು ಎಷ್ಟು? (ವಿವರ ನೀಡುವುದು)

## ಜಲಸಂಪನ್ಮೂಲ ಇಲಾಖೆಯ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಯ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೭೨ (೩೭೨೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜಲಸಂಪನ್ಮೂಲ ಇಲಾಖೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಗೆ ಆಯವ್ಯಯದಲ್ಲಿ ಎಷ್ಟು ಹಣ ನಿಗಧಿ ಮಾಡಲಾಗಿದೆ; ಅದರಲ್ಲಿ ಬಿಡುಗಡೆ ಮಾಡಲಾಗಿರುವ ಮತ್ತು ಖರ್ಚು ಮಾಡಲಾಗಿರುವ ಹಣ ಎಷ್ಟು; ೨೦೧೩–೧೪ ರಿಂದ ಇಲ್ಲಿಯವರೆಗೆ ವರ್ಷಾವಾರು ವಿವರ ನೀಡುವುದು;

(ಆ) ೨೦೧೩-೧೪ ರಿಂದ ಇಲ್ಲಿಯವರೆಗೆ ದಕ್ಷಿಣ ಕರ್ನಾಟಕದ ಯೋಜನೆಗಳಿಗೆ ಮತ್ತು ಉತ್ತರ ಕರ್ನಾಟಕ ಕೃಷ್ಣಾ ಮೇಲ್ದಂಡೆ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಮತ್ತು ಕಾವೇರಿ ಮೇಲ್ದಂಡೆ ಯೋಜನೆಗಳಿಗೆ ನಿಗಧಿಗೊಳಿಸಿರುವ, ಬಿಡುಗಡೆ ಮಾಡಿರುವ ಹಾಗೂ ಖರ್ಚು ಮಾಡಿರುವ ಹಣ ಎಷ್ಟು? (ವಿವರ ನೀಡುವುದು)

## ಭದ್ರತಾ ಯೋಜನೆಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೭೩ (೩೭೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಇಲಾಖೆಯಿಂದ ಬಡವರಿಗೆ ಭದ್ರತಾ ಯೋಜನೆಗಳಿಗೆ ಹಲವು ವಿಧವಾದ ಪಿಂಚಣಿ ಸೌಲಭ್ಯ ನೀಡುತ್ತಿರುವುದು ನಿಜವೇ;

(ಆ) ಹಾಗಿದ್ದರೆ, ಅಂತಹ ಯೋಜನೆಗಳು ಯಾವುವು; ೨೦೦೮-೦೯ ರಿಂದ ಇಲ್ಲಿಯವರೆಗೆ ಈ ಯೋಜನೆಗಳಿಗೆ ಸರ್ಕಾರ ನೀಡಿರುವ ಹಣದ ಮೊತ್ತ ಎಷ್ಟು; ಬಾಕಿ ಇರುವ ಹಣದ ಮೊತ್ತ ಎಷ್ಟು; (ಯೋಜನೆವಾರು ವಿವರ ನೀಡುವುದು)

(ಇ) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ; ನೀಡುತ್ತಿದ್ದಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಶೇಕಡಾವಾರು ಪಾಲು ಎಷ್ಟು? (ವರ್ಷಾವಾರು ವಿವರ ನೀಡುವುದು)

## ವಸತಿ ಯೋಜನೆಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೨೭೪ (೩೭೨೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಸತಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡಿರುವುದು ನಿಜವೇ;

(ಆ) ಹಾಗಿದ್ದರೆ, ೨೦೧೩–೧೪ ರಿಂದ ೨೦೧೭–೧೮ ರವರೆಗೆ ರಾಜ್ಯದ ಸರ್ಕಾರದಿಂದ ನಿರ್ಮಿಸಿದ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಫಲಾನುಭವಿಗಳಿಗೆ ಹಂಚಿಕೆಯಾಗಿರುವ ಮನೆಗಳು ಮತ್ತು ನಿವೇಶನಗಳ ಸಂಖ್ಯೆ ಎಷ್ಟು; ಮನೆಗಳು ಮತ್ತು ನಿವೇಶನಕ್ಕೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ವಿವರವನ್ನು ಜಿಲ್ಲಾವಾರು ನೀಡುವುದು)

(ಈ) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆ ಮಾಡಿದ ಹಣವೆಷ್ಟು; ಖರ್ಚಾದ ಹಣವೆಷ್ಟು; ಉಳಿಕೆ ಹಣ ಎಷ್ಟು? (ವಿವರವನ್ನು ವರ್ಷಾವಾರು ಯೋಜನೆಗಳ ಸಹಿತ ನೀಡುವುದು)

## ರೈತರು ತಮ್ಮ ಜಮೀನುಗಳ ಸರ್ವೆಗಾಗಿ ಸರ್ಕಾರಕ್ಕೆ ಹಣ ಪಾವತಿಸಿರುವ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೨೭೫ (೩೫೨೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರೈತರು ತಮ್ಮ ತಮ್ಮ ಜಮೀನುಗಳ ಸರ್ವೆಗಾಗಿ (ಅಳತೆ ಮಾಡಿ ಖಾತೆ ಮಾಡಿಕೊಳ್ಳಲು) ಸರ್ಕಾರಕ್ಕೆ ಹಣ ಪಾವತಿ ಮಾಡುತ್ತಿರುವುದು ನಿಜವೇ;

(ಆ) ಹಾಗಿದ್ದರೆ, ೨೦೧೩–೧೪ ರಿಂದ ೨೦೧೭–೧೮ ರವರೆಗೆ ಜಮೀನು ಸರ್ವೆಗಾಗಿ ರೈತರಿಂದ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಈ ಸರ್ವೆ ಕಾರ್ಯಕ್ಕೆ ರೈತರು ಪಾವತಿರುವ ಹಣ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ರೈತರು ಪಾವತಿಸಿರುವ ಹಣ ಸರ್ಕಾರದ ಬೊಕ್ಕಸಕ್ಕೆ ಸೇರದೆ ಪೋಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರದ ಬೊಕ್ಕಸಕ್ಕೆ ಸೇರದೆ ಪೋಲಾಗಿರುವ ಹಣದ ಮೊತ್ತ ಎಷ್ಟು; ಅದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ಕಾಡು ಪ್ರಾಣಿಗಳ ಹಾವಳಿಯಿಂದಾಗುವ ಬೆಳೆಹಾನಿಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೭೬ (೩೬೭೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವ್ಯಾಪಕವಾದ ಕಾಡು ಪ್ರಾಣಿಗಳ ಹಾವಳಿಯಿಂದ ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ರೈತರ ಕೃಷಿ ಬದುಕು ದುಸ್ತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಾಡುಕೋಣ, ಕಾಡುಹಂದಿ, ಜಿಂಕೆ, ಮಂಗ, ನವಿಲು ಮುಂತಾದ ವನ್ಯ ಜೀವಿಗಳ ಹಾವಳಿಯುನ್ನು ನಿಯಂತ್ರಿಸಲು ಅರಣ್ಯ ಇಲಾಖೆಯಿಂದ ತೆಗೆದುಕೊಳ್ಳುವ ಕ್ರಮವೇನು;

(ಇ) ಕಾಡು ಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ಹಾನಿಯ ಪರಿಶೀಲನೆಯ ಮೇರೆಗೆ ತಡೆ ಬೇಲಿ (Fencing) ಯನ್ನು ನಿರ್ಮಿಸಲು

ಇಲಾಖೆಯಿಂದ ಕ್ರಮ ವಹಿಸಲಾಗುವುದೇ; ಇಲ್ಲವಾದಲ್ಲಿ ರೈತರಿಗೆ ಉಂಟಾಗಿರುವ ಬೆಳೆ ನಷ್ಟಕ್ಕೆ ಸರಿಯಾದ ಪರಿಹಾರವನ್ನು ನೀಡಲು ಕ್ರಮ ವಹಿಸಲಾಗುವುದೇ?

## ಸಣ್ಣ ನೀರಾವರಿ ಇಲಾಖೆಯ ಕೆರೆ, ಕಿಂಡಿ ಆಣೆಕಟ್ಟುಗಳ ನಿರ್ವಹಣೆ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೭೭ (೩೬೭೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕೆರೆಗಳ ಸಂಖ್ಯೆ ಎಷ್ಟು; ಈ ಕೆರೆಗಳಿಗೆ ಕಳೆದ ಮೂರು ವರ್ಷಗಳಿಂದ ಮಾಡಲಾಗಿರುವ ವೆಚ್ಚವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಹೊಸ ಸರ್ಕಾರ ಬಂದ ನಂತರ ಉಡುಪಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕಿಂಡಿ ಆಣೆಕಟ್ಟೆಗಳ ನಿರ್ವಹಣೆಗೆ ಪ್ರತಿ ವರ್ಷ ಮಾಡಲಾಗುತ್ತಿರುವ ವೆಚ್ಚವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ದಕ್ಷಿಣ ಕನ್ನಡ, ಉಡುಪಿ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮವಾಹಿನಿ ಯೋಜನೆಯಲ್ಲಿ ಎಷ್ಟು ಕಿಂಡಿ ಆಣೆಕಟ್ಟುಗಳನ್ನು ನಿರ್ಮಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ; ಅವುಗಳ ಅಂದಾಜು ವೆಚ್ಚವೆಷ್ಟು?

## ರಾಜ್ಯದಲ್ಲಿ ಪೂರ್ಣಗೊಂಡಿರುವ ಮತ್ತು ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೭೮ (೩೬೭೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬೃಹತ್ ನೀರಾವರಿ ಇಲಾಖೆಯಿಂದ ಇದುವರೆಗೆ ಕೈಗೆತ್ತಿಕೊಂಡು ಪ್ರಾರಂಭಿಸಲಾದ ಯೋಜನೆಗಳು ಯಾವುವು; ಈ ಯೋಜನೆಗಳು ಯಾವಾಗ ಪ್ರಾರಂಭವಾಗಿವೆ; ಈ ಯೋಜನೆಗಳಿಗೆ ಪ್ರಾರಂಭವಾಗುವಾಗ ನಿಗಧಿಪಡಿಸಿದ ಅಂದಾಜು ವೆಚ್ಚವೆಷ್ಟು; ಪೂರ್ಣಗೊಂಡಾಗ ತಗುಲಿದ ವಚ್ಚವೆಷ್ಟು; (ಜಿಲ್ಲಾವಾರು, ಯೋಜನೆವಾರು ವಿವರ ನೀಡುವುದು)

(ಆ) ಮೇಲಿನ ಯೋಜನೆಗಳಲ್ಲಿ ಯೋಜಿಸಲಾದ ಕೃಷಿ ಅಚ್ಚುಕಟ್ಟು ಪ್ರದೇಶವೆಷ್ಟು; ಪ್ರಸ್ತುತ ಯೋಜನೆಯಿಂದ ಉಪಯೋಗ ಪಡೆಯುತ್ತಿರುವ ಕೃಷಿ ಅಚ್ಚುಕಟ್ಟು ಪ್ರದೇಶವೆಷ್ಟು; ಯೋಜನೆಯಿಂದ ಉಪಯೋಗ ಪಡೆಯಲು ಬಾಕಿ ಇರುವ ಕೃಷಿ ಅಚ್ಚುಕಟ್ಟು ಪ್ರದೇಶವೆಷ್ಟು; (ಜಿಲ್ಲಾವಾರು, ಯೋಜನೆವಾರು ವಿವರ ನೀಡುವುದು)

(ಇ) ಬೃಹತ್ ನೀರಾವರಿ ಇಲಾಖೆಯಿಂದ ಇದುವರೆಗೆ ಪ್ರಾರಂಭಿಸಿ ಇನ್ನೂ ಪೂರ್ಣವಾಗದ ಯೋಜನೆಗಳು ಯಾವುವು; ಈ ಯೋಜನೆಗಳನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಾವಕಾಶವೆಷ್ಟು; ಈ ಯೋಜನೆಗಳನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಅಂದಾಜು ವೆಚ್ಚವೆಷ್ಟು? (ಜಿಲ್ಲಾವಾರು, ಯೋಜನೆವಾರು ವಿವರ ನೀಡುವುದು)

## ಭೂಮಂಜೂರಾತಿಯಲ್ಲಿ ಬಾಕಿಯಿರುವ ಹಾಗೂ ಹಕ್ಕುಪತ್ರ ನೀಡಿದ ಪ್ರಕರಣದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೯ (೩೬೭೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭೂ ಸುಧಾರಣೆ ಕಾಯಿದೆ ಜಾರಿಗೆ ಬಂದ ನಂತರ ಉಡುಪಿ ಜಿಲ್ಲೆಯಲ್ಲಿ ನಮೂನೆ ೭ರಡಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಇತ್ಯರ್ಥಪಡಿಸಿದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; ಕರ್ನಾಟಕ ಉಚ್ಚ ನ್ಯಾಯಾಲಯದಿಂದ ವಾಪಸಾತಿಯಾದ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಇತ್ಯರ್ಥಪಡಿಸಿದ ಅರ್ಜಿಗಳ ಸಂಖ್ಯೆ ಎಷ್ಟು ; ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕೃಷಿ ಕಾರ್ಮಿಕರಿಗೆ ನಮೂನೆ ೭ಎ ಯಡಿ ಅರ್ಜಿ ಸಲ್ಲಿಸಲು ಯಾವಾಗ ಅವಕಾಶ ಕಲ್ಪಿಸಲಾಯಿತು; ಉಡುಪಿ ಜಿಲ್ಲೆಯಲ್ಲಿ ನಮೂನೆ ೭ಎ ರಡಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು; ಅವುಗಳಲ್ಲಿ ಇತ್ಯರ್ಥಪಡಿಸಿದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; ಕರ್ನಾಟಕ ಉಚ್ಚನ್ಯಾಯಾಲಯದಿಂದ ವಾಪಸಾತಿಯಾದ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಇತ್ಯರ್ಥ ಪಡಿಸಿದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಹಿಂದಿನ ಸರ್ಕಾರದ ಅವಧಿಯಲ್ಲಿ ೯೪ಸಿ ಯಡಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾತಿಯಾದ ಅರ್ಜಿಗಳ ಸಂಖ್ಯೆ ಎಷ್ಟು; ಈ ಅವಧಿಯಲ್ಲಿ ಸಲ್ಲಿಕೆಯಾದ ೯೪ಸಿ ಅರ್ಜಿಗಳು ಬಾಕಿ ಇದೆಯೇ; ಹೌದಾದಲ್ಲಿ, ಕಾರಣವೇನು; (ತಾಲ್ಲೂಕುವಾರು ವಿವರ ನೀಡುವುದು)

(ಈ) ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ೯೪ಸಿ ಯಡಿ ಅರ್ಜಿ ಸಲ್ಲಿಸಲು ಎಷ್ಟು ಬಾರಿ ಅವಕಾಶ ಕಲ್ಪಿಸಲಾಗಿರುತ್ತದೆ; ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಇತ್ಯರ್ಥ ಪಡಿಸಿ ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು; ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು; ಮಂಜೂರಾತಿ ನೀಡಿ ಹಣಪಾವತಿಸಿಕೊಳ್ಳದೆ ಬಾಕಿಯಿಡಲಾದ ಅರ್ಜಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ನಮೂನೆ ೫೦, ೫೩, ನಮೂನೆ ೭ ಮತ್ತು ೨ಎ ರಡಿ ಸಲ್ಲಿಸಿದ ಅರ್ಜಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೦ (೩೬೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಜಿಲ್ಲೆಯಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅಕ್ರಮ ಸಕ್ರಮ ಯೋಜನೆಯ ನಮೂನೆ ೫೦,೫೩ರ ಅರ್ಜಿಗಳ ಮಂಜೂರಾತಿಯ ಕುರಿತು ನಡೆಸಲಾದ ಸಭೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾತಿ ನೀಡಿ ಹಕ್ಕು ಪತ್ರ ನೀಡಿದ ಪ್ರಕರಣಗಳೆಷ್ಟು; ಮಂಜೂರಾತಿ ನೀಡಿ ಹಕ್ಕು ಪತ್ರ ನೀಡದ ಪ್ರಕರಣಗಳೆಷ್ಟು; ತಿರಸ್ಕರಿಸಿದ ಪ್ರಕರಣಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು, ಸಮಿತಿಯ ಸಭೆಯ ದಿನಾಂಕವಾರು ಮಾಹಿತಿ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಭೂಸುಧಾರಣೆ ಕಾಯಿದೆ ನಮೂನೆ ೭ರ ಅಡಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆಸಲಾದ ಸಭೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾತಿ ನೀಡಿದ ಪ್ರಕರಣಗಳೆಷ್ಟು; ತಿರಸ್ಕರಿಸಿದ ಪ್ರಕರಣಗಳೆಷ್ಟು; ಬಾಕಿಯಿರುವ ಪ್ರಕರಣಗಳೆಷ್ಟು; (ತಾಲ್ಲೂಕುವಾರು, ಸಭಾ ದಿನಾಂಕವಾರು ಮಾಹಿತಿ ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಮೂನೆ ೨ಎ ಅಡಿಯಲ್ಲಿ ನಡೆಸಲಾದ ಸಭೆಗಳ ಸಂಖ್ಯೆ ಎಷ್ಟು; ಈ ಸಭೆಯಲ್ಲಿ ಇತ್ಯರ್ಥ ಪಡಿಸಿ ಮಂಜೂರಾತಿ ನೀಡಿದ ಪ್ರಕರಣಗಳೆಷ್ಟು; ತಿರಸ್ಕರಿಸಿದ ಪ್ರಕರಣಗಳ ಸಂಖ್ಯೆ ಎಷ್ಟು; ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಸಮಿತಿಯ ಸಭಾ ದಿನಾಂಕವಾರು ಮಾಹಿತಿ ನೀಡುವುದು)

(ಈ) ಹೊಸ ಸರ್ಕಾರ ಅಸ್ತತ್ವಕ್ಕೆ ಬಂದ ನಂತರ ೯೪ಸಿ ಯಡಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಇತ್ಯರ್ಥಪಡಿಸಿದ ಅರ್ಜಿಗಳ ಸಂಖ್ಯೆ ಎಷ್ಟು; ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು; ತನಿಖೆಗೆ ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಪರಂಬೋಕು ಮತ್ತು ರಸ್ತೆಗಡಿ ಅಂಚನ್ನು ಬಿಟ್ಟು ೯೪ಸಿಯನ್ನು ಅರ್ಜಿಯ ಮಂಜೂರಾತಿಗೆ ಇರುವ ತಾಂತ್ರಿಕ ತೊಡಕುಗಳೇನು?

## ಶಿವಮೊಗ್ಗ ಜಿಲ್ಲೆಯಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ ವತಿಯಿಂದ ಅಭಿವೃದ್ಧಿ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೧ (೩೬೭೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ ವತಿಯಿಂದ ಅಭಿವೃದ್ಧಿ ಪಡಿಸಲಾಗುವ ಬಡಾವಣೆಗಳು ಯಾವುವು; (ವಿವರ ನೀಡುವುದು)

(ಆ) ಈಗಾಗಲೇ ಅಭಿವೃದ್ಧಿ ಪಡಿಸಲಾಗಿರುವ ಬಡಾವಣೆಗಳಲ್ಲಿ ಸಂಪೂರ್ಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ;

(ಇ) ಹೊಸದಾಗಿ ಬಡಾವಣೆ ನಿರ್ಮಾಣ ಮಾಡಲು ವಶಪಡಿಸಿಕೊಂಡಿರುವ ಜಮೀನು ಎಷ್ಟು; (ವಿವರ ಒದಗಿಸುವುದು)

(ಈ) ಹೌಸಿಂಗ್ ಬೋರ್ಡಿನ ಎಲ್ಲಾ ನಿವೇಶನಗಳು ಸಾರ್ವಜನಿಕರಿಗೆ ಹಂಚಿಕೆಯಾಗಿರುತ್ತದೆಯೇ; ಸಾರ್ವಜನಿಕ ಉದ್ದೇಶವಿರುವ ನಿವೇಶನಗಳು ಹಂಚಿಕೆ ಮಾಡದೇ ಉಳಿದಿರುವ ನಿವೇಶನಗಳು ಎಷ್ಟು?

## ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ, ಮೈಸೂರು

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೨ (೩೭೮೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರು, ಸದರಿ ಸಹಕಾರಿ ಸಂಘವು ಮೈಸೂರು ಮತ್ತು ಮಂಡ್ಯ ಜಿಲ್ಲೆಗೆ ಮಾತ್ರ ಸೀಮಿತವಾಗಿರುತ್ತದೆಯೇ ಅಥವಾ ರಾಜ್ಯ ವ್ಯಾಪ್ತಿಗೆ ಒಳಪಟ್ಟಿರುತ್ತದೆಯೇ; (ವಿವರ ನೀಡಿವುದು)

(ಆ) ಸದರಿ ಸಹಕಾರಿ ಮಂಡಳಿ ವತಿಯಿಂದ ರಾಜ್ಯಾದ್ಯಂತ ನೀಡಿರುವ ಮೀನು ಮಾರಾಟ ಮಳಿಗೆಗಳ ಜಿಲ್ಲಾವಾರು ವಿವರ ನೀಡುವುದು; (ಮಳಿಗೆ ಪಡೆದ ವ್ಯಕ್ತಿಯ ಹೆಸರು ಮತ್ತು ವಿಳಾಸ ಸಹಿತ ವಿವರ ನೀಡುವುದು)

(ಇ) ೨೦೧೦–೧೧ ರಿಂದ ೨೦೧೭–೧೮ ರವರೆಗೆ ಮಂಡಳಿಯವರು ಮೀನು ಮಾರಾಟ ಮಾಡಿರುವ ವಿವರ ನೀಡುವುದು?

## ಆಶ್ರಯ ಮನೆಗಳ ಹಂಚಿಕೆಯಲ್ಲಿ ವಂಚನೆ

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೩ (೩೭೦೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಶ್ರಯ ಮನೆಗಳ ಹಂಚಿಕೆಯಲ್ಲಿ ವಂಚನೆ ನಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲಿ ವಸತಿ ಯೋಜನೆಗಳಲ್ಲಿ ಒಂದಕ್ಕಿಂತ ಹೆಚ್ಚು ಆಶ್ರಯ ಮನೆಗಳನ್ನು ಪಡಿದಿರುವ ನಕಲಿ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮತ್ತು ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು)

(ಆ) ಈ ವಂಚನೆಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾದ ನಷ್ಟವೆಷ್ಟು;

(ಇ) ಈ ವಿಚಾರವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; ಅಕ್ರಮ ನಡೆಸಿದವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)

## ವಸತಿ ಇಲಾಖೆಯ ಮನೆಗಳ ನಿರ್ಮಾಣಕ್ಕೆ ಫಲಾನುಭವಿಗಳ ಆಯ್ಕೆಯ ಮಾನದಂಡಗಳ ಬಗ್ಗೆ

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೪ (೩೭೦೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಸತಿ ಇಲಾಖೆಯಲ್ಲಿ ಮನೆಗಳ ನಿರ್ಮಾಣಕ್ಕೆ ಫಲಾನುಭವಿಗಳ ಆಯ್ಕೆಯಲ್ಲಿ ನಿಗಧಿಪಡಿಸಿರುವ ಮಾನದಂಡಗಳೇನು; (ವಿವರ ನೀಡುವುದು)

(ಆ) ಈ ಹಿಂದೆ ನೀಡಿರುವ ಮನೆಗಳು ಶಿಥೀಲವಾಗಿದ್ದರೂ ಕೂಡ ಫಲಾನುಭವಿಗಳು ಮನೆಗಳನ್ನು ಪಡೆಯಲು ೨೦ ವರ್ಷ ಕಾಯಬೇಕೆ; (ವಿವರ ನೀಡುವುದು)

(ಇ) ಮನೆಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಜಾಗೃತಿ ಸಮಿತಿಯ ಕಾರ್ಯವೇನು; (ವಿವರ ನೀಡುವುದು)

(ಈ) ಜಾಗೃತಿ ಸಮಿತಿಯ ಮಾನದಂಡವೇನು; ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು?

## ಸರ್ಕಾರಿ ಆಸ್ತಿಯನ್ನು ನಾಶಗೊಳಿಸಿರುವ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೫ (೩೭೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರಿ ಆಸ್ತಿಯನ್ನು ನಾಶಗೊಳಿಸಿದರೆ ಯಾವ ಯಾವ ನಿಯಮ ಮತ್ತು ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಬಹುದು; (ಸರ್ಕಾರಿ ಆದೇಶದೊಂದಿಗೆ ವಿವರ ನೀಡುವುದು)

(ಆ) ಚಿಕ್ಕಮಗಳೂರು ತಾಲ್ಲೂಕು, ಕೆಳಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಡೇನೇರಲು ಗ್ರಾಮದಲ್ಲಿ ಇದ್ದ ಸರ್ಕಾರಿ ರಸ್ತೆಗೆ ಸರ್ಕಾರಿ ಹಳ್ಳ (ನದಿ) ಕ್ಕೆ ಕಟ್ಟಿದ್ದ ಸೇತುವೆಯನ್ನು ಜೆಸಿಬಿಯಿಂದ ಕೆಡವಿ ಸರ್ಕಾರಿ ಆಸ್ತಿಯನ್ನು ನಾಶ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ದಿನಾಂಕ: ೦೧–೦೭–೨೦೧೭ ರಂದು ಚಿಕ್ಕಮಗಳೂರು ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳಿಗೆ, ಮಾನ್ಯ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಹಾಗೂ ಮಾನ್ಯ ತಹಶೀಲ್ದಾರ್‌ಗೆ ದೂರು ನೀಡಿದರೂ ಕ್ರಮ ಕೈಗೊಳ್ಳದಿರಲು ಕಾರಣವೇನು;

(ಇ) ಈ ಸೇತುವೆಯುನ್ನು ನಾಶಪಡಿಸಿರುವುದಕ್ಕೆ ಯಾರನ್ನು ಹೊಣೆಗಾರನ್ನಾಗಿ ಮಾಡಲಾಗುವುದು; ಸರ್ಕಾರಿ ಸೇತುವೆಯನ್ನು ಕೆಡವಿದವರ ವಿರುದ್ಧ ಈ ವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು;

(ಈ) ಗ್ರಾಮದ ಗ್ರಾಮಸ್ಥರು ಸೇತುವೆ ಇಲ್ಲದೇ ಸಂಚಾರ ಮಾಡುವುದು ಕಷ್ಟವಾಗಿರುವುದರಿಂದ ಸೇತುವೆ ಕಲ್ಪಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಳೆಯಿಂದಾದ ಹಾನಿಯ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೬ (೩೬೮೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇತ್ತೀಚಿಗೆ ಸುರಿದ ಮಳೆಯಿಂದ ಬೆಳೆ, ಖಾಸಗಿ ಹಾಗೂ ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾನಿಯು ಪ್ರಮಾಣ ಎಷ್ಟು; ಹಾನಿಗೊಳಗಾಗಿರುವವರಿಗೆ ಇದುವರೆಗೂ ಎಷ್ಟು ಪರಿಹಾರ ನೀಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಕೊಳಚೆ ಪ್ರದೇಶದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೭ (೩೬೮೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು; (ಸ್ಥಳೀಯ ಸಂಸ್ಥೆವಾರು ಮಾಹಿತಿ ನೀಡುವುದು)

(ಆ) ಇಲ್ಲಿ ವಾಸಿಸುತ್ತಿರುವ ನಿವಾಸಿಗಳು "ಬೇಡಿಕೆ ಮೇಲೆ ಯೋಜನೆ" ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಾರೆಯೇ; ಎಷ್ಟು ಜನರಿಂದ ಅರ್ಜಿಗಳು ಸಲ್ಲಿಸಲ್ಪಟ್ಟಿವೆ; (ವಿವರ ನೀಡುವುದು)

(ಇ) ಅರ್ಜಿ ಸಲ್ಲಿಸಿದವರಿಗೆ ಸೂರು ಒದಗಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)

## ಕಲಬುರಗಿ ಅಂತರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೨೮೮ (೩೬೮೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಭಾಗೀಯ ಕೇಂದ್ರವಾಗಿರುವ ಕಲಬುರಗಿಯಲ್ಲಿ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣ ಮಾಡಬೇಕೆಂಬ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಹೊಸ ಕ್ರೀಡಾಂಗಣ ನಿರ್ಮಾಣಕ್ಕಾಗಿ ಜಮೀನು ಗುರುತಿಸಲಾಗಿದೆಯೇ? (ವಿವರ ನೀಡುವುದು)

## ನಿರ್ಮಿತಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೮೯ (೩೫೦೮) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಕೈಗೊಂಡ ಕಾಮಗಾರಿಗಳು ಯಾವುವು ; (ವಿವರ ನೀಡುವುದು)

(ಆ) ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನವನ್ನು ಬಳಸಲಾಗಿದೆ ; (ಕಾಮಗಾರಿವಾರು ವಿವರ ನೀಡುವುದು)

(ಇ) ಆ ಪೈಕಿ ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು ; ನಿರ್ವಹಿಸಿರುವ ಕಾಮಗಾರಿಗಳ ಅಂದಾಜು ಪಟ್ಟಿ ಮತ್ತು ನಕ್ಷೆ (ಮ್ಯಾಪ್) ಮತ್ತು ಕಾಮಗಾರಿ ಕೈಗೊಂಡಿರುವ ಸ್ಥಳ ಸಂಪೂರ್ಣ ಮಾಹಿತಿ ನೀಡುವುದು ;

(ಈ) ನಿರ್ಮಿತಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ನೀಡುವುದು ? (ಹೆಸರು ಮತ್ತು ಪದನಾಮಗಳೊಂದಿಗೆ ವಿವರ ನೀಡುವುದು)

## ರೈತರಿಗೆ ಜಮೀನು ಮಂಜೂರು ಮಾಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೯೦ (೩೫೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಗೋಮಾಳಗಳಿವೆ ; ಅವುಗಳ ವಿಸ್ತೀರ್ಣ ಎಷ್ಟು ; ಅದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

(ಆ) ಸಾಗುವಳಿ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಲ್ಲಿ ನಮೂನೆ – ೫೩ನ್ನು ಸಲ್ಲಿಸಿದ ಹಾಗೂ ಸಲ್ಲಿಸದ ರೈತರಿಗೆ ಜಮೀನು ಮಂಜೂರು ಮಾಡಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ರೈತರಿಗೆ ಜಮೀನು ನೀಡಿದ್ದಲ್ಲಿ ಗ್ರಾಮ ಮತ್ತು ಫಲಾನುಭವಿಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು ? (ತಾಲ್ಲೂಕುವಾರು ವಿವರ ನೀಡುವುದು)

## ಬೀದರ್ ಜಿಲ್ಲಾ ನೆಹರು ಕ್ರೀಡಾಂಗಣ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೯೧ (೩೫೦೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲಾ ನೆಹರು ಕ್ರೀಡಾಂಗಣ ನೆಲಸಮ ಗೊಂಡಿದ್ದು ಯಾವಾಗ ;

(ಆ) ಈ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಸರ್ಕಾರವು ಈ ಕ್ರೀಡಾಂಗಣವನ್ನು ಪುನಶ್ಚೇತನಗೊಳಿಸಲು ತೆಗೆದುಕೊಂಡ ಕಾಲ ಎಷ್ಟು ; ಕ್ರೀಡಾಂಗಣದ ಸುತ್ತಳತೆ ಎಷ್ಟು ; ಇದನ್ನು ಅಭಿವೃದ್ಧಿ ಪಡಿಸಲು ತಗಲುವ ವೆಚ್ಚ ಎಷ್ಟು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಪರವಾನಿಗೆ ರದ್ದಾಗಿರುವ ಸರ್ವೇಯರ್‌ಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೨೯೩ (೩೫೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಈ ವರ್ಷದಲ್ಲಿ ಬೀದರ್ ಜಿಲ್ಲೆಯಲ್ಲಿ ಜಮೀನುಗಳನ್ನು ಪೋಡಿ ಮಾಡಿಸಿಕೊಳ್ಳಲು ಬಂದಿರುವ ಅರ್ಜಿಗಳೆಷ್ಟು ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಪೋಡಿ ಮಾಡಲು ಹಣ ಪಾವತಿಸಿಕೊಂಡು ಜಮೀನು ಸರ್ವೆ ಮಾಡದೇ ಹಿಂತಿರುಗಿದ ಪ್ರಕರಣ ಎಷ್ಟು ; ಇವರು ಅದೇ ಕಾರ್ಯಕ್ಕೆ ಮತ್ತೆ ಹಣ ಪಾವತಿ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ತಡೆಯಲು ಕೈಗೊಂಡಿರುವ ಕ್ರಮಗಳೇನು;

(ಇ) ಪರವಾನಗಿ ರದ್ದಾಗಿರುವ ಸರ್ವೇಯರ್‌ಗಳು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಈ) ಪರವಾನಗಿ ರದ್ದಾದ ಸರ್ವೇಯರ್‌ಗಳನ್ನೇ ಇಲಾಖೆಯಲ್ಲಿ ಬಳಕೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಆಲಮಟ್ಟಿ ಜಲಾಶಯದಲ್ಲಿ ನೀರಿನ ದುರ್ಬಳಕೆಯಾಗುತ್ತದೆಯೆಂದು ಅಲ್ಲಿನ ರೈತ ಸಂಘ ಸಂಸ್ಥೆಯವರು ನ್ಯಾಯಾಲಯದ ಮೊರೆ ಹೋಗಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೨೯೪ (೩೬೯೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಲಮಟ್ಟಿ ಜಲಾಶಯದಲ್ಲಿ ನೀರಿನ ದುರ್ಬಳಕೆಯಾಗುತ್ತಿದೆಯೆಂದು ಅಲ್ಲಿನ ರೈತರು ಸ್ವತಂತ್ರ ಸಮಿತಿ ನೇಮಕ ಮಾಡುವಂತೆ ಕೋರಿ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದು ನಿಜವೇ; ಇದಕ್ಕೆ ಕಾರಣವೇನು ;

(ಆ) ಈ ಕುರಿತು ಸಂಕ್ಷಿಪ್ತ ವಿವರ ನೀಡುವುದು ?

## ಹಿರಿಯ ನಾಗರೀಕ ನ್ಯಾಯಾಲಯದಲ್ಲಿ ತ್ವರಿತವಾಗಿ ನ್ಯಾಯ ಸಿಗುವಂತಾಗಲು ಪ್ರತ್ಯೇಕ ವಿಶೇಷ ನ್ಯಾಯಾಧೀಕರಣ ರೂಪಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೨೯೫ (೩೬೯೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿರಿಯ ನಾಗರೀಕರಿಗೆ ನ್ಯಾಯಾಲಯದಲ್ಲಿ ತ್ವರಿತಗತಿಯಲ್ಲಿ ನ್ಯಾಯ ಸಿಗುವಂತಾಗಲು ಯಾವ ರೀತಿಯ ವಿಶೇಷ ಸೌಲಭ್ಯ ನೀಡಲಾಗಿದೆ;

(ಆ) ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಈ ಸಂಬಂಧ ಹಿರಿಯ ನಾಗರೀಕರಿಗೆ ವಿಶೇಷ ನ್ಯಾಯಾಧೀಕರಣ ರೂಪಿಸಬೇಕೆಂದು ಅಭಿಪ್ರಾಯ ವ್ಯಕ್ತ ಪಡಿಸಿರುವುದು ನಿಜವೇ; (ವಿವರ ನೀಡುವುದು)

(ಇ) ಈ ಬಗ್ಗೆ ಸರ್ಕಾರದ ನಿಲುವೇನು ? (ವಿವರ ನೀಡುವುದು)

## ಭಾರಿ ಮಳೆಯಿಂದಾಗಿರುವ ಬೆಳೆ ಹಾನಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೩೨೯೬ (೩೬೭೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ತಿಂಗಳಿನಿಂದ ರಾಜ್ಯದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಆಗಿರುವ ಬೆಳೆ ಹಾನಿ ಪ್ರಮಾಣವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕೃಷಿಕರಿಗೆ ಇದರಿಂದ ಆಗಿರುವ ನಷ್ಟವನ್ನು ಅಂದಾಜು ಮಾಡಲಾಗಿದೆಯೇ ; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಸಂಬಂಧ ರೈತರಿಗೆ ಉಂಟಾಗಿರುವ ನಷ್ಟವನ್ನು ತುಂಬಲು ಹಾಗೂ ರೈತರುಗಳಿಗೆ ಆರ್ಥಿಕ ಸಹಾಯ ನೀಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಬೆಂಗಳೂರು ನಗರದಲ್ಲಿ ಭೂಪರಿವರ್ತನೆಯಾಗದ ಕೃಷಿಯೇತರ ಜಮೀನುಗಳಲ್ಲಿ ಅನಧಿಕೃತ ಬಡಾವಣೆ ನಿರ್ಮಿಸಿರುವ ಬಗ್ಗೆ

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) :–**

೩೯೭೭ (೩೭೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ೧೯೮ ವಾರ್ಡ್‌ಗಳಲ್ಲಿ ಯಾವುದೇ ರೀತಿಯ ಭೂಪರಿವರ್ತನೆಯಾಗದೇ ಕೃಷಿಯೇತರ ಅಭಿವೃದ್ಧಿಗೆ ಬಳಸಿರುವ ಖಾಸಗಿ ಕಂದಾಯ ಜಮೀನುಗಳಲ್ಲಿ ಅನಧಿಕೃತ ಬಡಾವಣೆಗಳು ನಿರ್ಮಾಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಅವುಗಳ ಸಂಖ್ಯೆ, ವಿಸ್ತೀರ್ಣ, ಸರ್ವೆ ನಂಬರ್, ಗ್ರಾಮ ಮತ್ತು ಬಡಾವಣೆಗಳ ಹೆಸರನ್ನು ಒಳಗೊಂಡ ಸಂಪೂರ್ಣವಾದ ಮಾಹಿತಿ ನೀಡುವುದು ?

## ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿಯ ಬಡಾವಣೆ ಬಗ್ಗೆ

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) :–**

೩೨೯೮ (೩೭೧೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಬಡಾವಣೆಗಳು ಇವೆಯೇ ; ಇದ್ದಲ್ಲಿ ಸಂಪೂರ್ಣ ಮಾಹಿತಿಯನ್ನು ನೀಡುವುದು ;

(ಆ) ನಗರ ಜಿಲ್ಲೆಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ನಿರ್ಮಾಣಗೊಂಡಿರುವ ಎಲ್.ಐ.ಜಿ/ಎಂ.ಐ.ಜಿ/ಹೆಚ್.ಐ.ಜಿ. ಕಟ್ಟಡಗಳು ಹಾಗೂ ಇತರೆ ಕಟ್ಟಡಗಳ ಸಂಖ್ಯೆಗಳು ಎಷ್ಟು ; (ಸಂಪೂರ್ಣ ಮಾಹಿತಿಯನ್ನು ನೀಡುವುದು)

(ಇ) ನಿರ್ಮಾಣಗೊಂಡಿರುವ ಕಟ್ಟಡಗಳಲ್ಲಿ ಖಾಲಿ ಇರುವ ಕಟ್ಟಡಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಈ ವಸತಿ ಸಮುಚ್ಛಯಗಳ ನಿರ್ವಹಣೆ ಹಾಗೂ ವಾರ್ಷಿಕ ದುರಸ್ಥಿಯನ್ನು ನಿರ್ವಹಿಸುತ್ತಿರುವವರು ಯಾರು ? (ಸಂಪೂರ್ಣ ಮಾಹಿತಿ ನೀಡುವುದು)

## ಸಮ್ಮತಿ ಪತ್ರ ಪಡೆಯದೆ ಕಾರ್ಖಾನೆಗಳನ್ನು ನಡೆಸುತ್ತಿರುವ ಬಗ್ಗೆ

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) :–**

೩೨೯೯ (೩೭೧೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಸಮ್ಮತಿ ಪತ್ರ (Concent for Establishment and Concent for Operation) ಪಡೆದಿರುವ ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳ ಸಂಖ್ಯೆ ಎಷ್ಟು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಸಮ್ಮತಿ ಪತ್ರ ಪಡೆಯದೇ ಪರಿಸರಕ್ಕೆ ಮಾಲಿನ್ಯ ಮಾಡುತ್ತಿರುವ ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳ ಸಂಖ್ಯೆ ಎಷ್ಟು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಜಲ ಕಾಯ್ದೆ ೧೯೭೪ ಹಾಗೂ ವಾಯು ಕಾಯ್ದೆ ೧೯೮೧ರ ಪ್ರಕಾರ ಸಮ್ಮತಿ ಪತ್ರ (Concent for Establishment and Concent for Operation) ಪಡೆಯದೇ ನಡೆಸುತ್ತಿರುವ ಕಾರ್ಖಾನೆ ಹಾಗೂ ಸಂಸ್ಥೆಗಳ ಮೇಲೆ ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ವಿರುದ್ಧ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಸಂಖ್ಯೆ : WP No. 15112/2009 ರಲ್ಲಿ ಸರ್ಕಾರದಿಂದ ನೀಡಿರುವ ಪ್ರತಿವಾದಿ ಹೇಳಿಕೆಯ ನಕಲು ಹಾಗೂ ಮಾಹಿತಿಯನ್ನು ಒದಗಿಸುವುದು ?

## ಬೆಂಗಳೂರು ನಗರದಲ್ಲಿರುವ ಸರ್ಕಾರಿ ಕಂದಾಯ ಸ್ವತ್ತುಗಳ ಬಗ್ಗೆ

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) :–**

೩೩೦೦ (೩೭೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರದ ಸ್ವತ್ತುಗಳ ಗುತ್ತಿಗೆ/ಬಾಡಿಗೆ/ಷರತ್ತುಬದ್ಧ ಮಂಜೂರಾತಿಯೊಂದಿಗೆ ಖಾಸಗಿ ಸಂಸ್ಥೆಗಳ ಹಾಗೂ ವ್ಯಕ್ತಿಗಳಿಗೆ ನೀಡಿರುವ ಸಂಖ್ಯೆ ಎಷ್ಟು ; (ಸಂಪೂರ್ಣವಾದ ನೀಡುವುದು)

(ಆ) ಖಾಸಗಿ ಸಂಸ್ಥೆಗಳು/ವ್ಯಕ್ತಿಗಳಿಗೆ ಸರ್ಕಾರದಿಂದ ಗುತ್ತಿಗೆ/ಬಾಡಿಗೆ ಮಂಜೂರಾತಿಯಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಷರತ್ತುಗಳನ್ನು ಉಲ್ಲಂಘಿಸಿರುವ ಪ್ರಕರಣಗಳು ಇವೆಯೇ ; ಇದ್ದಲ್ಲಿ, ಸಂಪೂರ್ಣವಾದ ಮಾಹಿತಿ ನೀಡುವುದು ;

(ಇ) ೨೦೧೩ರಿಂದ ಇಲ್ಲಿಯವರೆವಿಗೂ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಅನಧಿಕೃತವಾಗಿ ಹಾಗೂ ಷರತ್ತುಗಳನ್ನು ಉಲ್ಲಂಘಿಸಿ ಸರ್ಕಾರಿ ಸ್ವತ್ತುಗಳನ್ನು ಅತಿಕ್ರಮಿಸಿರುವ ಪ್ರಕರಣಗಳಲ್ಲಿ ಒತ್ತುವರಿಗಳನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆದಿರುವ ಪ್ರಕರಣಗಳೆಷ್ಟು ; (ಇದರ ಸಂಖ್ಯೆ, ವಿಸ್ತೀರ್ಣ, ಸರ್ವೆ ನಂ. ಮತ್ತು ಗ್ರಾಮದ ಹೆಸರನ್ನು ಒಳಗೊಂಡ ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯ ಹೊಸಕೆರೆಹಳ್ಳಿ, ಆವಲಹಳ್ಳಿ ಹಾಗೂ ಕೆಂಗೇರಿ ಹೋಬಳಿಯ ಪಂತರಪಾಳ್ಯದಲ್ಲಿ ಸರ್ಕಾರಿ ಜಾಗಗಳನ್ನು ವಶಕ್ಕೆ ಪಡೆದಿರುವ ಪ್ರಕರಣಗಳು ಇವೆಯೇ ; ಇದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು ?

## ಕಂದಾಯ ಇಲಾಖೆ ಭೂ ಹಂಚಿಕೆ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) :–**

೩೩೦೧ (೩೭೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಕಂದಾಯ ಇಲಾಖೆ ವತಿಯಿಂದ ರಾಜ್ಯದಲ್ಲಿ ಎಷ್ಟು ಸಂಘ ಸಂಸ್ಥೆಗಳಿಗೆ ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ಭೂ ಮಂಜೂರಾತಿ ಮಾಡಲಾಗಿರುತ್ತದೆ ; (ವಿಸ್ತೀರ್ಣ ಸಹಿತವಾಗಿ ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರದ ವತಿಯಿಂದ ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ಭೂಮಿಯನ್ನು ಪಡೆದಿರುವ ಸಂಘ ಸಂಸ್ಥೆಗಳ ಉದ್ದೇಶಕ್ಕೆ ಅನುಗುಣವಾಗಿ ಭೂಮಿಯನ್ನು ಉಪಯೋಗ ಮಾಡುತ್ತಿವೆಯೇ; ಎಷ್ಟು ಪ್ರಕರಣಗಳಲ್ಲಿ ಸರ್ಕಾರದ ನಿಯಮಗಳನ್ನು ಉಲ್ಲಂಘನೆ ಮಾಡಿದ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿರುತ್ತದೆ ;

(ಇ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಭೂ ಸುಧಾರಣಾ ಕಾಯ್ದೆ ಕಲಂ ೭೯(ಎ) ಮತ್ತು ೭೯(ಬಿ) ಮತ್ತು ೮೦ ಉಲ್ಲಂಘನೆ ಪ್ರಕರಣಗಳು ಎಷ್ಟು ದಾಖಲಾಗಿರುತ್ತದೆ ; ಇವುಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ದಾಖಲಾಗಿರುವ ಪ್ರಕರಣಗಳು ಎಷ್ಟು ಮತ್ತು ವಿಲೇವಾರಿಯಾಗಿರುವ ಪ್ರಕರಣಗಳು ಎಷ್ಟು ; (ವಿವರವಾದ ಮಾಹಿತಿಯನ್ನು ನೀಡುವುದು)

(ಈ) ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಒತ್ತುವರಿಯಾದ ಎಷ್ಟು ಭೂಮಿಯನ್ನು ತೆರವುಗೊಳಿಸಲಾಗಿರುತ್ತದೆ; ಅಕ್ರಮ ಭೂ ಒತ್ತುವರಿದಾರರ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿರುತ್ತವೆ ;

(ಉ) ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಭೂ ಪರಿವರ್ತನೆ ಮಾಡಲಾಗಿರುತ್ತದೆ ? (ಹೆಸರು ಸಹಿತವಾಗಿ ಭೂ ಪರಿವರ್ತನೆ ಹೊಂದಿದವರ ವಿವರಗಳನ್ನು ನೀಡುವುದು)

## ಅರಣ್ಯ ಭೂಮಿ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) :–**

೩೩೦೨ (೩೭೬೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಅರಣ್ಯ ಭೂಮಿ ಹೆಚ್ಚುವರಿ ಆಗಿರುತ್ತದೆಯೇ ; ಹಾಗಿದ್ದಲ್ಲಿ, ವಿವರ ನೀಡುವುದು;

(ಆ) ಅರಣ್ಯ ಇಲಾಖೆಯು ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಸಸಿಗಳನ್ನು ನಾಟಿ ಮಾಡಲು ರೈತರಿಗೆ ಮತ್ತು ಖಾಸಗಿಯವರಿಗೆ ನೀಡಿರುತ್ತದೆ ; ಸದರಿ ಸಸಿಗಳನ್ನು ಬೆಳೆಯಲು ಮತ್ತು ವಿತರಣೆ ಮಾಡಲು ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ ;

(ಇ) ಅರಣ್ಯ ಇಲಾಖೆಯು ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ ಯೋಜನೆಯನ್ನು ಜಾರಿಗೊಳಿಸಿರುತ್ತದೆ ; ಇದಕ್ಕೆ ಬಿಡುಗಡೆಯಾಗಿರುವ ಹಣವೆಷ್ಟು ;

(ಈ) ಅರಣ್ಯ ಇಲಾಖೆಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಅರಣ್ಯ ಬೆಳೆಸಲು ಎಷ್ಟು ಹಣ ವಿನಿಯೋಗಿಸಿದೆ ; ಅರಣ್ಯ ಇಲಾಖೆಯು ಸದರಿ ತಾಲ್ಲೂಕಿನಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಪ್ರಸಕ್ತ ಸಾಲಿನಲ್ಲಿ ಎಲ್.ಪಿ.ಜಿ. ಗ್ಯಾಸ್ ಸಂಪರ್ಕ, ಬಯೋ ಗ್ಯಾಸ್ ಘಟಕ, ಸೋಲಾರ್ ಬಿಸಿ ನೀರು ಉಪಕರಣ ಹಾಗೂ ಸೋಲಾರ್ ಲ್ಯಾಂಪ್‌ಗಳನ್ನು ವಿತರಣೆ ಮಾಡಿರುತ್ತದೆ ; ಈ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆಯಾಗಿರುತ್ತದೆ ; ಫಲಾನುಭವಿಗಳ ವಿವರಗಳನ್ನು ನೀಡತಕ್ಕದ್ದು ;

(ಉ) ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಅರಣ್ಯ ಪ್ರದೇಶ ವ್ಯಾಪ್ತಿ ಎಷ್ಟು ; ಯಾವಾಗ ಸದರಿ ಪ್ರದೇಶವು ಅಧಿಕೃತವಾಗಿ ಘೋಷಣೆಯಾಗಿರುತ್ತದೆ ?

## ಕೆರೆ ಸಂಜೀವಿನಿ ಯೋಜನೆ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) :–**

೩೩೦೩ (೩೭೬೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೆರೆ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ; ಸದರಿ ಯೋಜನೆಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣ ಎಷ್ಟು ; ಆ ಪೈಕಿ ಬಳಕೆಯಾಗಿರುವ ಹಣ ಎಷ್ಟು ;

(ಆ) ಪಶ್ಚಿಮವಾಹಿನಿ ಯೋಜನೆಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು ; ಬಳಕೆಯಾಗಿರುವ ಹಣ ಎಷ್ಟು ;

(ಇ) ಸರ್ಕಾರ ಬೀದರ್, ಹಾವೇರಿ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡಿರುತ್ತದೆ ; ಇದಕ್ಕೆ ಬಿಡುಗಡೆಯಾಗಿರುವ ಹಣವೆಷ್ಟು ;

(ಈ) ಸರ್ಕಾರವು ಅಂತರ್ಜಲ ಅಭಿವೃದ್ಧಿಗೆ ಕಲ್ಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ವಿಶೇಷ ಯೋಜನೆಯನ್ನು ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ, ಸದರಿ ಯೋಜನೆಗೆ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ ;

(ಉ) ಸರ್ಕಾರವು ೨೦೧೭–೧೮ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಿರುತ್ತದೆ ; ಇಲ್ಲಿಯವರೆಗೆ ತುಮಕೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಎಷ್ಟು ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿರುತ್ತದೆ ;

(ಊ) ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ರಾಜ್ಯದ ಎಷ್ಟು ಕೆರೆಗಳು ಬರುತ್ತವೆ ; ಕೆರೆ ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರಿನ ನಗರ ಜಿಲ್ಲೆಯ ಕೆರೆಗಳ ಅಭಿವೃದ್ಧಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಹಣ ವೆಚ್ಚ ಮಾಡಿರುತ್ತದೆ ? (ವಿವರಗಳನ್ನು ನೀಡುವುದು)

## ಏತ ನೀರಾವರಿ ಯೋಜನೆಗಳ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ) :–**

೩೩೦೪ (೩೭೫೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ಸರ್ಕಾರದ ನೀರಾವರಿ ಇಲಾಖೆಯು ಕೆಂಪವಾಡ (ಬಸವೇಶ್ವರ) ಏತ ನೀರಾವರಿ ಯೋಜನೆ ಜಾರಿಯ ಕುರಿತು ಇಲ್ಲಿವಯರೆಗೆ ಎಷ್ಟು ಮೊತ್ತದ ಜಾಹೀರಾತನ್ನು ನೀಡಿರುತ್ತದೆ ; ನೀರಾವರಿ ಇಲಾಖೆಯು ಸದರಿ ಯೋಜನೆಗೆ ತಯಾರು ಮಾಡಿರುವ ಅಂದಾಜು ವೆಚ್ಚ ಎಷ್ಟು ; ರಾಜ್ಯ ಸರ್ಕಾರವು ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು ;

(ಆ) ನೀರಾವರಿ ಇಲಾಖೆಯು ಬಳ್ಳಾರಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿಯಲ್ಲಿ ಚಿಲವಾರಬಂಡಿ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸಿರುತ್ತದೆಯೇ ; ಈ ಯೋಜನೆಗೆ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಆಗಿರುತ್ತದೆ ;

(ಇ) ನೀರಾವರಿ ಇಲಾಖೆಯು ಸಾಸುವೆಹಳ್ಳಿ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸಿರುತ್ತದೆಯೇ ; ಜಾರಿಗೊಳಿಸಿದ್ದಲ್ಲಿ ಎಷ್ಟು ಹಣ ಬಿಡುಗಡೆಯಾಗಿರುತ್ತದೆ ;

(ಈ) ನೀರಾವರಿ ಇಲಾಖೆಯು ಕಾವೇರಿ ಕಣಿವೆ ವ್ಯಾಪ್ತಿಯಲ್ಲಿ ಎಷ್ಟು ಕಾಲುವೆಗಳ ಆಧುನೀಕರಣಕ್ಕೆ ೨೦೧೭–೧೮ನೇ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೊಂಡಿರುತ್ತದೆ ; ಈ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ಎಷ್ಟು ; ಇವುಗಳಿಗೆ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿರುತ್ತದೆ ;

(ಉ) ತುಮಕೂರು ಜಿಲ್ಲೆಯ ಹೇಮಾವತಿ ವ್ಯಾಪ್ತಿಯಲ್ಲಿ ಎಷ್ಟು ಕಾಲುವೆಗಳ ಆಧುನೀಕರಣಕ್ಕೆ ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೊಂಡಿರುತ್ತದೆ ; ಇವುಗಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು ? (ವಿವರವಾದ ಮಾಹಿತಿಯನ್ನು ನೀಡತಕ್ಕದ್ದು)

## ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೩೩೦೫ (೩೭೬೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ದಿನಾಂಕ: ೦೧–೦೪–೨೦೧೭ ರಿಂದ ಇಲ್ಲಿಯವರೆಗೆ ಖಾಸಗಿ ಕೈಗಾರಿಕೆಗಳಲ್ಲಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಎಷ್ಟು ಕನ್ನಡಿಗರಿಗೆ "ಸಿ" ಮತ್ತು "ಡಿ" ದರ್ಜೆಯ ನೌಕರಿಯನ್ನು ನೀಡಲಾಗಿರುತ್ತದೆ ಎಷ್ಟು ಜನ ಅಂಗವಿಕಲರಿಗೆ ಉದ್ಯೋಗವನ್ನು ನೀಡಲಾಗಿರುತ್ತದೆ ;

(ಆ) ರಾಜ್ಯ ಸರ್ಕಾರವು ಬಾಲ ಕಾರ್ಮಿಕ ಮುಕ್ತ ರಾಜ್ಯ ಮಾಡುವ ನಿಟ್ಟಿನಲ್ಲಿ ಕ್ರೀಯಾ ಯೋಜನೆಯನ್ನು ಕೈಗೊಂಡಿದೆಯೇ ; ಕೈಗೊಂಡಿದ್ದಲ್ಲಿ, ಎಂದಿನಿಂದ ಯೋಜನೆ ಜಾರಿಗೆ ಬಂದಿರುತ್ತದೆ ;

(ಇ) ರಾಜ್ಯ ಸರ್ಕಾರದ ಆಶಾದೀಪ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿರುತ್ತದೆಯೇ ; ಜಾರಿಗೆ ಬಂದಿದ್ದಲ್ಲಿ, ಖಾಸಗಿ ಸಂಸ್ಥೆಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿರುತ್ತದೆ ; ಈ ಸಂಬಂಧ ರಾಜ್ಯ ಸರ್ಕಾರ ಉಪ ಯೋಜನೆಯಲ್ಲಿ ೫ ಕೋಟಿ ರೂಪಾಯಿಗಳ ಹಣವನ್ನು ವಿನಿಯೋಗ ಮಾಡಿರುತ್ತದೆಯೇ ; ಮಾಡಿದ್ದಲ್ಲಿ, ಅದರ ವಿವರಗಳನ್ನು ನೀಡತಕ್ಕದ್ದು ;

(ಈ) ರಾಜ್ಯ ಸರ್ಕಾರವು ಹಮಾಲಿಗಳ, ಬೀದಿ ವ್ಯಾಪಾರಿಗಳ, ಮನೆ ಕೆಲಸಗಾರರ ಹಾಗೂ ದಿನಗೂಲಿಗಳ ಅನುಕೂಲಕ್ಕಾಗಿ ಅಪಘಾತ ವಿಮಾ ಯೋಜನೆಯನ್ನು ಮತ್ತು ಪ್ರಾವಿಡೆಂಟ್ ಫಂಡ್ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಿರುತ್ತದೆಯೇ ; ಸದರಿ ಯೋಜನೆಗೆ ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಆಗಿರುತ್ತದೆ ಮತ್ತು ಇವರಿಗೆ ಸ್ಮಾರ್ಟ್ ಕಾರ್ಡ್ ನೀಡಲಾಗಿದೆಯೇ ;

(ಉ) ರಾಜ್ಯ ಸರ್ಕಾರವು ರಾಜ್ಯದಲ್ಲಿ ಎಷ್ಟು ನೊಂದಾಯಿತ ಕಾರ್ಮಿಕರನ್ನು ಹೊಂದಿರುತ್ತದೆ ; ಇವರಿಗೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ;

(ಊ) ರಾಜ್ಯ ಸರ್ಕಾರವು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರ ನಿವೃತ್ತಿ ವಯಸ್ಸನ್ನು ೬೦ ವರ್ಷಗಳಿಗೆ ಏರಿಸಲು ಕ್ರಮಕೈಗೊಂಡಿದೆಯೇ ?

## ರಾಜ್ಯದಲ್ಲಿ ನೀರಾವರಿಗೆ ಯೋಗ್ಯವಾದ ಭೂಮಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು):–**

೩೩೦೬ (೩೭೦೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ನೀರಾವರಿಗೆ ಯೋಗ್ಯವಾದ ಭೂಮಿ ಎಷ್ಟು; ನೀರಾವರಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಲಾಗಿರುವ ಹಣ ಎಷ್ಟು; ಎಷ್ಟು ಪ್ರದೇಶ ನೀರಾವರಿಗೆ ಒಳಪಟ್ಟಿದೆ; ಇನ್ನೂ ಎಷ್ಟು ಪ್ರದೇಶ ನೀರಾವರಿಗೆ ಒಳಪಡಬೇಕಾಗಿದೆ; ಇದಕ್ಕಾಗಿ ಸರ್ಕಾರದ ಯೋಜನೆಗಳಾವುವು; (ಹಾವೇರಿ ಜಿಲ್ಲೆಯ ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು)

(ಆ) ಹಾವೇರಿ ಜಿಲ್ಲೆಯಲ್ಲಿ ಯಾವ ಯಾವ ನದಿಗಳ ನೀರು ಬಳಕೆಗೆ ಹಾಗೂ ನೀರಾವರಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ; (ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು)

(ಇ) ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳಿವೆ; ಹಾಗೂ ಕೆರೆ ನೀರು ಬಳಕೆಗೆ ಹಾಗೂ ನೀರಾವರಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ? (ತಾಲ್ಲೂಕುವಾರು, ಗ್ರಾಮವಾರು ಕೆರೆಗಳ ಹೆಸರುಗಳೊಂದಿಗೆ ವಿವರ ನೀಡುವುದು)

## ರಾಜ್ಯದಲ್ಲಿ ಸಣ್ಣ ನೀರಾವರಿಗೆ ಒದಗಿಸಿದ ಅನುದಾನದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು):–**

೩೩೦೭ (೩೭೦೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿದ ಅನುದಾನವೆಷ್ಟು; (ವರ್ಷವಾರು ೨೦೧೩–೧೪ ರಿಂದ ೨೦೧೭–೧೮ರವರೆಗೆ ಮಾಹಿತಿ ನೀಡುವುದು)

(ಆ) ಈ ಇಲಾಖೆಯಿಂದ ಹಮ್ಮಿಕೊಳ್ಳಲಾದ ಅಭಿವೃದ್ಧಿ ಯೋಜನೆಗಳಾವುವು;

(ಇ) ಹಾವೇರಿ ಜಿಲ್ಲೆಗೆ ಮಂಜೂರಾದ ಅನುದಾನ ಎಷ್ಟು; ಬಿಡುಗಡೆಯಾದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಈ) ಹಾವೇರಿ ಜಿಲ್ಲೆಯ ೬ ವಿಧಾನ ಸಭಾ ಕ್ಷೇತ್ರದಲ್ಲಿ ಆದ ಕಾಮಗಾರಿಗಳು ಯಾವುವು ಆ ಕೆಲಸಕ್ಕೆ ಖರ್ಚು ಮಾಡಿದ ಹಣವೆಷ್ಟು; ಯಾವ ಹಂತದಲ್ಲಿವೆ ? (ತಾಲ್ಲೂಕುವಾರು, ಗ್ರಾಮವಾರು, ಕಾಮಗಾರಿವಾರು ವಿವರ ನೀಡುವುದು)

## ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕಿನಲ್ಲಿ ತುಂಗಾ ಜಲಾಶಯದಿಂದ ಆದ ಕಾಮಗಾರಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು):–**

೩೩೦೮ (೩೭೧೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕಿನಲ್ಲಿ ತುಂಗಾ ಜಲಾಶಯದ ೨೦೧೩–೧೪ ರಿಂದ ೨೦೧೬–೧೭ರವರೆಗೆ ಕಾಮಗಾರಿಗಳು ಯಾವುವು ; (ಕೆಲಸದ ಹೆಸರು ಸಮೇತ ಮಾಹಿತಿ ನೀಡುವುದು)

(ಆ) ರಾಣಿಬೆನ್ನೂರು ತಾಲ್ಲೂಕಿನಲ್ಲಿ ಈಗಾಗಲೇ ಮಾಡಿದ ಕಾಮಗಾರಿ ಕಳಪೆ ಮಟ್ಟದಾಗಿರುತ್ತದೆ ಎಂಬ ಆರೋಪ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ?

## ಹಾವೇರಿ ಜಿಲ್ಲೆಯಲ್ಲಿ ಜಿಂಕೆ ಮತ್ತು ಸಾರಂಗಗಳ ಹಾವಳಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೮೯ (೩೭೦೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಜಿಂಕೆ ಹಾಗೂ ಸಾರಂಗಗಳು ರೈತರ ಹೊಲ ಮತ್ತು ತೋಟಗಳಿಗೆ ನುಗ್ಗಿ ಬೆಳೆಗಳನ್ನು ನಾಶ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಹೆಕ್ಟೇರ್ (ಎಕರೆ) ಬೆಳೆ ನಾಶವಾಗಿದೆ ; ಯಾವ ಯಾವ ಬೆಳೆಗಳು ನಾಶವಾಗಿವೆ ; (ತಾಲ್ಲೂಕುವಾರು ಗ್ರಾಮವಾರು ಸಂಪೂರ್ಣ ವಿವರ ನೀಡುವುದು, ಹಿಂಗಾರು ಹಾಗೂ ಮುಂಗಾರು ಬೆಳೆಗಳ ವಿವರ ನೀಡುವುದು)

(ಇ) ಹಾವೇರಿ ಜಿಲ್ಲೆಯಲ್ಲಿ ಆದ ಅಲ್ಪ ಮಳೆಯಲ್ಲಿ ರೈತರು ಧೈರ್ಯ ಮಾಡಿ ಬೆಳೆದ ಬೆಳೆಗಳು ಜಿಂಕೆ ಹಾಗೂ ಸಾರಂಗಗಳಿಂದ ಸಂಪೂರ್ಣ ನಾಶವಾದ ರೈತರಿಗೆ ಸರ್ಕಾರದಿಂದ ಪ್ರತಿ ಎಕರೆಗೆ ಎಷ್ಟು ಸಹಾಯಧನ ಕೊಡಲಾಗಿದೆ ; ಕೊಟ್ಟಿದ್ದರೆ, ಪ್ರತಿ ಎಕರೆಗೆ ಎಷ್ಟು ಹಾಗೂ ಎಷ್ಟು ರೈತರಿಗೆ ವಿತರಿಸಲಾಗಿದೆ ; (ತಾಲ್ಲೂಕುವಾರು, ಗ್ರಾಮವಾರು ಹಾಗೂ ರೈತರ ಹೆಸರುಗಳೊಂದಿಗೆ ವಿವರ ನೀಡುವುದು)

(ಈ) ಸುಮಾರು ವರ್ಷಗಳಿಂದ ರೈತರ ಬೆಳೆಗಳಿಗೆ ಜಿಂಕೆ ಹಾಗೂ ಸಾರಂಗಗಳಿಂದ ತೊಂದರೆಯಾಗುತ್ತಿದ್ದರೂ ಕ್ರಮ ಕೈಗೊಳ್ಳದಿರಲು ಕಾರಣವೇನು ? (ಸಂಪೂರ್ಣ ವಿವರ ನೀಡುವುದು)

## ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ರಾಜ್ಯಕ್ಕೆ ಬಿಡುಗಡೆಯಾದ ಅನುದಾನದ ವಿವರ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೧೦ (೩೫೦೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಇದುವರೆವಿಗೂ ಕರ್ನಾಟಕ ರಾಜ್ಯದ ಕೊಳಚೆ ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಹಣ ಎಷ್ಟು;

(ಆ) ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಬಿಡುಗಡೆಯಾದ ಹಣದಲ್ಲಿ ರೂಪಿಸಿರುವ ಕ್ರಿಯಾ ಯೋಜನೆಗಳು ಯಾವುವು;

(ಇ) ಈ ಯೋಜನೆಯ ಅಡಿಯಲ್ಲಿ ನಿರ್ಮಾಣಗೊಳ್ಳಲಿರುವ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಈ) ಈ ಯೋಜನೆಯಡಿ ಬಿಡುಗಡೆಯಾದ ಹಣದಲ್ಲಿ ಬೆಂಗಳೂರು ನಗರ ಸೇರಿದಂತೆ ಯಾವ ಯಾವ ಜಿಲ್ಲೆ, ತಾಲ್ಲೂಕುಗಳಿಗೆ ಅನುದಾನ ಖರ್ಚು ಮಾಡಲಾಗುತ್ತಿದೆ; ಎಷ್ಟು ಖರ್ಚು ಮಾಡಲಾಗುತ್ತಿದೆ ?

## ಗದಗ ಜಿಲ್ಲೆಯ ರೋಣ ಪಟ್ಟಣದ ವಸತಿ ಯೋಜನೆಯಡಿ ಮನೆ ನಿರ್ಮಾಣ ಹಾಗೂ ಹಂಚಿಕೆ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–**

೩೩೧೧ (೩೭೩೮) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗದಗ ಜಿಲ್ಲೆ ರೋಣ ಪಟ್ಟಣ ಪಂಚಾಯತಿ ವತಿಯಿಂದ ವಾಜಪೇಯಿ ವಸತಿ ಯೋಜನೆಯಡಿ ಬಡವರಿಗಾಗಿ ಮನೆ ವಿತರಿಸಲು ಎಷ್ಟು ಎಕರೆ ಭೂಮಿಯನ್ನು ಖರೀದಿಸಲಾಗಿದ್ದು ಯಾವಾಗ ;

(ಆ) ಈ ವಸತಿ ಯೋಜನೆಗಾಗಿ ಸರ್ಕಾರದಿಂದ ನಿಗದಿಪಡಿಸಲಾಗಿದ್ದ ಹಣ ಎಷ್ಟು ;

(ಇ) ಈ ಯೋಜನೆಯಡಿ ಎಷ್ಟು ಮನೆಗಳನ್ನು ಕಟ್ಟಲಾಗಿದೆ ಹಾಗೂ ಇನ್ನೂ ಎಷ್ಟು ಮನೆಗಳನ್ನು ಕಟ್ಟುವ ಯೋಜನೆ ಸರ್ಕಾರದ ಮುಂದಿದೆ ;

(ಈ) ಈ ಯೋಜನೆಗೆ ಇಲ್ಲಿಯವರೆಗೆ ಖರ್ಚು ಮಾಡಲಾದ ಹಣ ಎಷ್ಟು ; (ವಿವರ ನೀಡುವುದು)

(ಉ) ಮನೆ ಹಂಚಿಕೆ ಮಾಡಲು ಫಲಾನುಭವಿಗಳನ್ನು ಗುರುತಿಸಲಾಗಿದೆಯೇ ; ಈ ಮೊದಲು ಸಿದ್ಧಪಡಿಸಲು ಫಲಾನುಭವಿಗಳ ಪಟ್ಟಿಯಲ್ಲಿ ಬದಲಾವಣೆ ಏನಾದರೂ ಮಾಡಲಾಗಿದೆಯೇ ; ಹಕ್ಕು ಪತ್ರ ವಿತರಣೆ ಮಾಡಲಾಗಿದೆಯೇ ; (ವಿವರ ನೀಡುವುದು)

(ಊ) ಈಗಾಗಲೇ ಕಟ್ಟಲಾಗಿರುವ ಮನೆಗಳಿಗೆ ಅವಶ್ಯವಿರುವ ರಸ್ತೆ, ನೀರು ಹಾಗೂ ವಿದ್ಯುತ್ ಪೂರೈಸಲಾಗಿದೆಯೇ ?

## ಅನುಕಂಪದ ಆಧಾರದ ಮೇಲೆ ನೇಮಕಾತಿ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೧೨ (೩೭೬೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಕಂದಾಯ ವಿಭಾಗ ಹಾಗೂ ಉಪ-ಕಂದಾಯ ವಿಭಾಗಗಳು ಎಷ್ಟು; ಅವು ಯಾವುವು ; (ವಿವರವಾದ ಮಾಹಿತಿ ನೀಡುವುದು)

(ಆ) ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ೨೦೦೧ ರಿಂದ ಇಲ್ಲಿಯವರೆಗೆ ಎಷ್ಟು ಪ್ರಸ್ತಾವನೆಗಳನ್ನು ಸ್ವೀಕರಿಸಿ, ಆದೇಶ ಹೊರಡಿಸಲಾಗಿದೆ ; (ಕಂದಾಯ ವಿಭಾಗವಾರು ವಿವರವಾದ ಮಾಹಿತಿ ಕೊಡುವುದು)

(ಇ) ೨೦೦೧ ರಿಂದ ಇಲ್ಲಿಯವರೆಗೆ ಸ್ವೀಕರಿಸಿದ ಪ್ರಸ್ತಾವನೆಗಳು ಎಷ್ಟು; ಆದೇಶ ಹೊರಡಿಸಿದವೆಷ್ಟು; ಹಾಲಿ ಚಾಲ್ತಿಯಲ್ಲಿರುವ ಬಾಕಿ ಇರುವುದೆಷ್ಟು ; ತಿರಸ್ಕೃತಗೊಂಡಿರುವುದೆಷ್ಟು ? (ವಿವರವಾಗಿ ಶಿಫಾರಸ್ಸು ಮಾಡಿದ ಇಲಾಖೆ, ಅಭ್ಯರ್ಥಿಯ ಹೆಸರು, ನೇಮಕಗೊಂಡ ಹುದ್ದೆ, ಹಾಗೂ ಇಲಾಖೆಯ ಹೆಸರಿನೊಂದಿಗೆ ಮಾಹಿತಿ ಕೊಡುವುದು)

## ಹುಬ್ಬಳ್ಳಿ – ಧಾರವಾಡ ಜಿಲ್ಲೆಗಳಲ್ಲಿ ಕೌಶಲ್ಯ ತರಬೇತಿ ನೀಡುವ ಬಗ್ಗೆ

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೧೩ (೩೫೦೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹುಬ್ಬಳ್ಳಿ – ಧಾರವಾಡ ಜಿಲ್ಲೆಗಳಲ್ಲಿ ಕೌಶಲ್ಯ ತರಬೇತಿಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ತಾಲ್ಲೂಕುವಾರು ವಿವರ ನೀಡುವುದು ; (ಪುರುಷ ಮತ್ತು ಮಹಿಳೆಯರು)

(ಆ) ಆಯವ್ಯಯದಲ್ಲಿ ಯುವಕರಿಗೆ ಕೌಶಲ್ಯ ತರಬೇತಿ ಹಾಗೂ ಒಂದು ಲಕ್ಷ ಉದ್ಯೋಗವೆಂದು ಮಾಡಿರುವ ಘೋಷಣೆಯಂತೆ ಹುಬ್ಬಳ್ಳಿ – ಧಾರವಾಡ ಜಿಲ್ಲೆಗಳಲ್ಲಿ ಎಷ್ಟು ಯುವಕರಿಗೆ ಕೌಶಲ್ಯ ತರಬೇತಿ ಉದ್ಯೋಗ ನೀಡಲಾಗಿದೆ ; (ವಿವರ ನೀಡುವುದು)

(ಇ) ಹುಬ್ಬಳ್ಳಿ – ಧಾರವಾಡದಲ್ಲಿ ಎಲ್ಲಿ ಕೌಶಲ್ಯ ಕೇಂದ್ರ ಹಾಗೂ ಪ್ರಥಮ ದರ್ಜೆ ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪಿಸಲಾಗಿದೆ ; (ವಿವರ ನೀಡುವುದು)

(ಈ) ಕೌಶಲ್ಯ ತರಬೇತಿ ಪಡೆದು ಅಭ್ಯರ್ಥಿಗಳು ಸ್ವಯಂ ಉದ್ಯೋಗ ಮಾಡಲು ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ಸೌಲಭ್ಯ ಮಾಡಲಾಗಿದೆಯೇ ? (ವಿವರ ನೀಡುವುದು)

## ರಾಜ್ಯದಲ್ಲಿ ಆನೆ ಮತ್ತು ಹುಲಿ ದಾಳಿಯ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೧೪ (೩೬೬೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಆನೆ ಮತ್ತು ಹುಲಿ ದಾಳಿಯಿಂದ ಬೆಳೆ ಹಾನಿ ಹಾಗೂ ಪ್ರಾಣ ಹಾನಿಯಾದ ಪ್ರಕರಣಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸಂತ್ರಸ್ತರಿಗೆ ಪರಿಹಾರ ಧನ ನೀಡಲು ಬಾಕಿಯಿರುವ ಪ್ರಕರಣಗಳೆಷ್ಟು; ಪರಿಹಾರದ ಮೊತ್ತವೆಷ್ಟು;

(ಇ) ಕೊಡಗು ಜಿಲ್ಲೆಯಲ್ಲಿ ಈ ರೀತಿ ಪರಿಹಾರ ಧನ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು; ಅವುಗಳ ಮೊತ್ತವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಪರಿಹಾರ ನೀಡಲು ಬಾಕಿಯಿರುವ ಮೊತ್ತವನ್ನು ಪಾವತಿಸಲು ಇಲಾಖೆ ಯಾವ ಕ್ರಮ ವಹಿಸಲಾಗಿದೆ; ಎಷ್ಟು ಸಮಯದೊಳಗೆ ನೀಡಲಾಗುವುದು ?

## ಅರಣ್ಯ ಅಧಿಕಾರಿ ಹುದ್ದೆಗಳಿಗೆ ಅರಣ್ಯ ಪದವೀಧರರಿಗೆ ಮೀಸಲು ನೀಡುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೧೫ (೩೬೬೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ವಲಯ ಅರಣ್ಯಾಧಿಕಾರಿ ಹಾಗೂ ಉಪವಲಯ ಅರಣ್ಯಾಧಿಕಾರಿಗಳ ಹುದ್ದೆಗಳು ಎಷ್ಟು; (ವಲಯವಾರು ಮಾಹಿತಿ ನೀಡುವುದು)

(ಆ) ಅರಣ್ಯ ಇಲಾಖೆಯಲ್ಲಿ ವಲಯ ಅರಣ್ಯಾಧಿಕಾರಿ ಹಾಗೂ ಉಪವಲಯ ಅರಣ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ನೇಮಕಾತಿ ಮಾಡಿ ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ನೇಮಕಾತಿ ಮಾಡುವಾಗ ಅರಣ್ಯ ಪದವೀಧರರಿಗೆ ವಲಯ ಅರಣ್ಯಾಧಿಕಾರಿ ಹಾಗೂ ಉಪವಲಯ ಅರಣ್ಯಾಧಿಕಾರಿಗಳ ಹುದ್ದೆಗೆ ನೀಡಲಾಗಿರುವ ಶೇಕಡಾ ಮೀಸಲಾತಿ ಎಷ್ಟು ;

(ಈ) ೨೦೧೭–೧೮ನೇ ಸಾಲಿನಲ್ಲಿ ಎಷ್ಟು ಅರಣ್ಯ ಪದವೀಧರರನ್ನು ಅರಣ್ಯ ವಲಯ ಅರಣ್ಯಾಧಿಕಾರಿ ಹಾಗೂ ಉಪವಲಯ ಅರಣ್ಯಾಧಿಕಾರಿಗಳ ಹುದ್ದೆಗೆ ನೇಮಕಾತಿ ಮಾಡಲಾಗಿದೆ ?

## ಸಣ್ಣ ನೀರಾವರಿ ವ್ಯಾಪ್ತಿಯ ಕೆರೆಗಳ ಒತ್ತುವರಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ .(ಪದವೀಧರರ ಕ್ಷೇತ್ರ):–**

೩೩೧೬ (೩೬೪೯) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು;

(ಆ) ಈ ಕೆರೆಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಒತ್ತುವರಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಕೆರೆವಾರು ವಿಸ್ತೀರ್ಣವಾರು ವಿಶೇಷವಾಗಿ ಮಂಡ್ಯ ಜಿಲ್ಲೆ ಕೆರೆಗಳನ್ನೊಳಗೊಂಡಂತೆ ವಿವರ ನೀಡುವುದು ;

(ಇ) ಈ ಕೆರೆಗಳ ಸರ್ವೆಕಾರ್ಯವನ್ನು ನಡೆಸಿ, ಕೆರೆ ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ?

## ಮೇಕೆದಾಟು ಡ್ಯಾಂ ಯೋಜನೆಯ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ .(ಪದವೀಧರರ ಕ್ಷೇತ್ರ):–**

೩೩೧೭ (೩೬೪೭) ಮಾನ್ಯ ಭಾರಿ ಮತ್ತು ಮಾಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಮೇಕೆದಾಟು ಬಳಿ ಅಣೆಕಟ್ಟು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಇದ್ದಲ್ಲಿ, ಮೇಕೆದಾಟು ಡ್ಯಾಂನ ಯೋಜನಾ ವರದಿ ಸಿದ್ಧವಾಗಿದೆಯೇ;

(ಇ) ಇದ್ದಲ್ಲಿ ಈ ಯೋಜನೆಯ ಅಂದಾಜು ಮೊತ್ತ ಎಷ್ಟು; ಈ ಡ್ಯಾಂನ ನೀರಿನ ಸಾಮರ್ಥ್ಯ ಎಷ್ಟು; ಈ ಯೋಜನೆ ಉದ್ದೇಶ ಏನು ;

(ಈ) ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕೆ ಇರುವ ಅಡೆ ತಡೆ ಏನು;

(ಉ) ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ; ಕೈಗೆತ್ತಿಕೊಳ್ಳುವುದು ಯಾವಾಗ ?

## ಮಹಾದಾಯಿ ನೀರಾವರಿ ಯೋಜನೆಯ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ .(ಪದವೀಧರರ ಕ್ಷೇತ್ರ):–**

೩೩೧೮ (೩೬೪೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇಲ್ಲಿಯವರೆಗೆ ಮಹಾದಾಯಿ ನೀರಾವರಿ ಯೋಜನೆಯಲ್ಲಿ ಖರ್ಚಾದ ಹಣ ಎಷ್ಟು;

(ಆ) ಈ ಯೋಜನೆಯಲ್ಲಿ ಇಲ್ಲಿಯವರೆಗೆ ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ;

(ಇ) ಮಹಾದಾಯಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ತಿಳಿಸಿ?

## ರಾಜ್ಯದಲ್ಲಿ ಸಂಭವಿಸುತ್ತಿರುವ ಮ್ಯಾನ್‌ಹೋಲ್ ಕಾರ್ಮಿಕರ ಸಾವು ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ .(ಪದವೀಧರರ ಕ್ಷೇತ್ರ):–**

೩೩೧೯ (೩೬೪೮) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಿಂದ (೨೦೦೭–೨೦೧೭) ಮ್ಯಾನ್‌ಹೋಲ್‌ಗಳ ದುರಸ್ಥಿ ವೇಳೆ ಸಾವನ್ನಪ್ಪಿದ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಈ ಕಾರ್ಮಿಕರ ಸಾವಿಗೆ ಕಾರಣರಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಈ ರೀತಿ ಮ್ಯಾನ್‌ಹೋಲ್ ದುರಸ್ಥಿ ವೇಳೆ ಸಂಭವಿಸುತ್ತಿರುವ ಕಾರ್ಮಿಕರ ಸಾವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಬೆಂಗಳೂರು ಸುತ್ತ–ಮುತ್ತ ಭೂಕಬಳಿಕೆದಾರರಿಂದ ವಶಪಡಿಸಿಕೊಂಡ ಜಮೀನಿನ ಬಗ್ಗೆ

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೩೩೨೦ (೩೬೫೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಸುತ್ತ–ಮುತ್ತ ಭೂಕಬಳಿಕೆದಾರರಿಂದ ವಶಪಡಿಸಿ–ಕೊಂಡಿರುವ ಜಮೀನಿನ ವಿಸ್ತೀರ್ಣ ಎಷ್ಟು ;

(ಆ) ಒತ್ತುವರಿದಾರರಿಂದ ತೆರವುಗೊಳಿಸಿದ ಈ ಸರ್ಕಾರಿ ಜಮೀನನ್ನು ಯಾವ–ಯಾವ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುತ್ತದೆ; (ಸಂಸ್ಥೆವಾರು ವಿಸ್ತೀರ್ಣವಾರು ವಿವರ ನೀಡುವುದು)

(ಇ) ಯಾವ ಉದ್ದೇಶಕ್ಕಾಗಿ ಈ ಜಮೀನನ್ನು ಸರ್ಕಾರಿ ಸಂಸ್ಥೆಗಳಿಗೆ ಮಂಜೂರಾತಿ ಮಾಡಿದೆ ; ಮಂಜೂರಾತಿ ಮಾಡಿದ ದಿನಾಂಕ ಸಹಿತ ಮಾಹಿತಿ ನೀಡುವುದು ;

(ಈ) ಈ ಸರ್ಕಾರಿ ಸಂಸ್ಥೆಗಳ ಈ ಜಮೀನನ್ನು ಯಾವ ಉದ್ದೇಶಕ್ಕೆ ಉಪಯೋಗಿಸುತ್ತಿವೆ ; ಈ ಜಮೀನಿನ ಉಪಯೋಗದ ಬಗ್ಗೆ ವಿವರ ನೀಡುವುದು?

## ಸಣ್ಣ ನೀರಾವರಿ ಕೆರೆ–ಕುಂಟೆಗಳ ಕುರಿತು

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು) :–**

೩೩೨೧ (೩೭೫೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಸೇರಿದ ಕೆರೆ-ಕುಂಟೆ ಮುಂತಾದವು ಯಾವ ಯಾವ ಗ್ರಾಮದಲ್ಲಿ ಅಸ್ತಿತ್ವದಲ್ಲಿವೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಸದರಿ ಕೆರೆ-ಕುಂಟೆಗಳ ದುರಸ್ತಿ ಮತ್ತು ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಅದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು; (ಕೆರೆ-ಕುಂಟೆವಾರು ವಿವರ ನೀಡುವುದು)

(ಇ) ೨೦೧೪-೧೫ರಿಂದ ೨೦೧೭-೧೮ (ಇಂದಿನವರೆಗೆ) ಸಾಲುಗಳಲ್ಲಿ ಕೆರೆ-ಕುಂಟೆಗಳಿಗೆ ತುಂಬಿಸಲಾದ ನೀರಿನ ಪ್ರಮಾಣವೆಷ್ಟು; ಆ ನೀರನ್ನು ಸದ್ಬಳಕೆ ಮಾಡಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು? (ಸಂಪೂರ್ಣ ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಪೊನ್ನಂಪೇಟೆ ಹಾಗೂ ಕುಶಾಲನಗರ ತಾಲ್ಲೂಕುಗಳನ್ನು ಹೊಸದಾಗಿ ರಚಿಸುವ ಕುರಿತು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭೆಯಿಂದ ಚುನಾಯಿತರಾದವರು):-**

೩೩೨೨ (೩೭೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಪೊನ್ನಂಪೇಟೆ ಹಾಗೂ ಕುಶಾಲನಗರ ತಾಲ್ಲೂಕುಗಳನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು ;

(ಇ) ಸದರಿ ಹೊಸ ತಾಲ್ಲೂಕುಗಳನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲದಿದ್ದಲ್ಲಿ, ಇವುಗಳನ್ನು ಹೊಸ ತಾಲ್ಲೂಕುಗಳಾಗಿ ರಚಿಸಲು ಇರುವ ತೊಂದರೆಗಳೇನು ಹಾಗೂ ಅಡ್ಡಿಯಾಗಿರುವ ಮಾನದಂಡಗಳೇನು ? (ಸಂಪೂರ್ಣ ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿನ ವಸತಿ ರಹಿತರ ಕುರಿತು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭೆಯಿಂದ ಚುನಾಯಿತರಾದವರು):–**

೩೩೨೩ (೩೭೫೩) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಇರುವ ವಸತಿ ರಹಿತರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಗ್ರಾಮ ಪಂಚಾಯತಿವಾರು, ಗ್ರಾಮವಾರು ಹಾಗೂ ವರ್ಗವಾರು ವಿವರ ನೀಡುವುದು)

(ಆ) ಸದರಿ ಜನರಿಗೆ ವಸತಿ ಕಲ್ಪಿಸಲು ಸರ್ಕಾರ ನಿಗಧಿಪಡಿಸಿದ ಕಾಲಮಿತಿಯೇನು ;

(ಇ) ಅವರಿಗೆ ನಿವೇಶನ ಹಾಗೂ ವಸತಿ ಕಲ್ಪಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)

## ತಾಲ್ಲೂಕು ಮಟ್ಟದಲ್ಲಿ ವಸತಿ ಯೋಜನೆಗಳ ಉಸ್ತುವರಿ ಕುರಿತು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭೆಯಿಂದ ಚುನಾಯಿತರಾದವರು):–**

೩೩೨೪ (೩೭೫೬) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತಾಲ್ಲೂಕು ಮಟ್ಟದಲ್ಲಿ ವಸತಿ ಯೋಜನೆಗಳನ್ನು ಪ್ರಸ್ತುತ ಯಾರು ಉಸ್ತುವಾರಿ ಮಾಡುತ್ತಿದ್ದಾರೆ ;

(ಆ) ತಾಲ್ಲೂಕು ಮಟ್ಟದಲ್ಲಿ ವಸತಿ ಯೋಜನೆಗಳ ಸರಿಯಾದ ಉಸ್ತುವಾರಿ ಹಾಗೂ ಮೇಲ್ವಿಚಾರಣೆ ಇಲ್ಲದೆ, ಪ್ರಗತಿ ಕುಂಠಿತಗೊಂಡು, ಅರ್ಹ ಹಾಗೂ ಬಡ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯ ನಿಗದಿತ ಸಮಯದೊಳಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ತಾಲ್ಲೂಕು ಮಟ್ಟದಲ್ಲಿ ಗ್ರೂಪ್–ಬಿ ವೃಂದದ ಹುದ್ದೆಯನ್ನು ಸೃಜಿಸಿ, ವಸತಿ ಯೋಜನೆಯ ಅನುಷ್ಠಾನದಲ್ಲಿ ಈಗಾಗಲೇ ತೊಡಗಿಸಿಕೊಂಡಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಪದೋನ್ನತಿ ನೀಡಿ ಸದರಿ ಹುದ್ದೆಯನ್ನು ತುಂಬಲು ಸಾಧ್ಯವಿಲ್ಲವೇ? (ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿನ ಕ್ರೀಡಾ ಹಾಸ್ಟೆಲ್‌ಗಳ ಇನ್‌ಟೇಕ್ ಹೆಚ್ಚಿಸುವ ಕುರಿತು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೭೫ (೩೮೫೫) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರೀಡಾ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; ಅವು ಯಾವುವು; (ಸಂಪೂರ್ಣ ಪಟ್ಟಿ ನೀಡುವುದು)

(ಆ) ಸದರಿ ಹಾಸ್ಟೆಲ್‌ಗಳಲ್ಲಿ ಪ್ರತಿ ವರ್ಷ (ಇನ್‌ಟೇಕ್) ಪ್ರವೇಶ ಪಡೆದವರ ಸಂಬಳ ಎಷ್ಟು ; (ಪ್ರತಿ ಹಾಸ್ಟೆಲ್‌ನ ವಿವರವನ್ನು ಪ್ರತ್ಯೇಕವಾಗಿ ನೀಡುವುದು)

(ಇ) ಸದರಿ ಹಾಸ್ಟೆಲ್‌ಗಳಲ್ಲಿ ಕ್ರೀಡಾಳುಗಳಿಗೆ ಸಿಗುತ್ತಿರುವ ಸೌಲಭ್ಯಗಳೇನು; (ಸಂಪೂರ್ಣ ವಿವರ ನೀಡುವುದು)

(ಈ) ಸದರಿ ಹಾಸ್ಟೆಲ್‌ಗಳಲ್ಲಿ (ಇನ್‌ಟೇಕ್) ಪ್ರವೇಶ ಸಂಖ್ಯೆ ಹೆಚ್ಚಿಸುವ ಹಾಗೂ ಹೊಸ ಕ್ರೀಡಾ ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

## ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿ ತಪ್ಪಿಸಲು ಕೈಗೊಂಡಿರುವ ಕ್ರಮಗಳ ಕುರಿತು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೨೬ (೩೭೫೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಕಾಡಾನೆ ದಾಳಿಯಿಂದ ಮೃತರಾದ ಹಾಗೂ ಹಾನಿಗೊಳಗಾದ ಮನುಷ್ಯರ ಪ್ರಕರಣಗಳ ಸಂಖ್ಯೆ ಎಷ್ಟು; ಹಾಗೂ ಯಾವುವು; (ಪ್ರತಿ ಪ್ರಕರಣದ ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಪ್ರಕರಣಗಳಲ್ಲಿ ತೊದರೆಗೊಳಗಾದವರಿಗೆ ನೀಡಿರುವ ಪರಿಹಾರವೇನು; (ಪ್ರತಿ ಪ್ರಕರಣದ ವಿವರ ನೀಡುವುದು)

(ಇ) ಪ್ರಸಕ್ತ ವರ್ಷದಲ್ಲಿ ಕಾಡಾನೆ ದಾಳಿ ತಡೆಯುವ ಸಲುವಾಗಿ ಕೈಗೊಂಡಿರುವ ಕ್ರಮಗಳೇನು; ವಿನಿಯೋಗಿಸಿರುವ ಅನುದಾನವೆಷ್ಟು;

(ಈ) ಶಾಶ್ವತವಾಗಿ ಕಾಡಾನೆ ದಾಳಿಯನ್ನು ತಡೆಯಲು ತೆಗೆದುಕೊಂಡಿರುವ ಧೀರ್ಘಕಾಲ ಬಾಳಿಕೆಯ ಕಾಮಗಾರಿಗಳೇನು; ಅವುಗಳಿಗೆ ವಿನಿಂಯೋಜಿಸಿರುವ ಅನುದಾನವೆಷ್ಟು ಹಾಗೂ ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ?

## ಬೆಳೆ ಹಾನಿ ಹಾಗೂ ಪರಿಹಾರದ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೨೭ (೩೬೭೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಈ) ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಸುರಿದ ಮಳೆಗೆ ಬೀದರ್ ಜಿಲ್ಲೆಯಲ್ಲಿ ರೈತರು ಬಿತ್ತಿದ್ದ ಬಿತ್ತನೆ ಹಾಗೂ ಕಟಾವಿಗೆ ಬಂದ ಬೆಳೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಳಾಗಿರುವ ಪ್ರದೇಶವನ್ನು ಸಮೀಕ್ಷೆ ನಡೆಸಲಾಗಿದೆಯೇ; (ತಾಲ್ಲೂಕುವಾರು ವಿವರ ನೀಡುವುದು) ಎಷ್ಟು ಪ್ರದೇಶವನ್ನು ಸಮೀಕ್ಷೆ ನಡೆಸಲಾಗಿದೆ ; (ವಿವರ ನೀಡುವುದು)

(ಇ) ಬೆಳೆ ನಾಶವಾಗಿರುವ ರೈತರಿಗೆ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ, ನೀಡಲಾಗಿರುವ ಪರಿಹಾರ ಮೊತ್ತ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೨೮ (೩೭೬೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಲ್ಲಿ ಆಶ್ರಯ ಯೋಜನೆಯಡಿ ನಿವೇಶನ ರಹಿತರಿಗೆ ನಿವೇಶನಗಳನ್ನು ನೀಡಲು ಬೀದರ್ ಜಿಲ್ಲೆಯ ಗ್ರಾಮ ಪಂಚಾಯತ್‌ಗಳಿಗೆ ಎಷ್ಟು ಜಮೀನನ್ನು ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು ಗ್ರಾಮವಾರು ಮಾಹಿತಿ ನೀಡುವುದು)

(ಆ) ಮಂಜೂರಾದ ಜಮೀನುಗಳಲ್ಲಿ ಗ್ರಾಮವಾರು ಎಷ್ಟು ನಿವೇಶನಗಳನ್ನು ರಚಿಸಲಾಗಿದೆ ; ಎಷ್ಟು ನಿವೇಶನಗಳನ್ನು ನಿವೇಶನ ರಹಿತರಿಗೆ ವಿತರಿಸಲಾಗಿದೆ ; (ವಿವರ ನೀಡುವುದು)

(ಇ) ಜಮೀನು ಮಂಜೂರಾಗಿದ್ದಲ್ಲಿ ನಿವೇಶನವನ್ನು ರಚಿಸದೇ ಬಾಕಿ ಉಳಿದಿರುವ ಜಮೀನು ಎಷ್ಟು ?

## ಬೀದರ್ ಜಿಲ್ಲೆಯಲ್ಲಿ ಬಾಲ ಕಾರ್ಮಿಕರ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೨೯ (೩೭೬೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಇಂದಿಗೂ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಶಾಲೆ ಬಿಟ್ಟು ಬಾಲ ಕಾರ್ಮಿಕರು ಭಿಕ್ಷೆ ಬೇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕೈಗೊಂಡ ಕ್ರಮಗಳೇನು;

(ಇ) ಕಾರ್ಮಿಕ ಇಲಾಖೆಯಿಂದ ಕಾರ್ಮಿಕರ ಅಭಿವೃದ್ಧಿಯಾಗಿ ೨೦೧೬–೧೭, ೨೦೧೭–೧೮ ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ? (ವಿವರ ನೀಡುವುದು)

## ಕಾರಂಜಾ ಮುಲ್ಲಾ ಮಾರಿ ಹಾಗೂ ಚುಳಕೆ ನಾಲಾ ಯೋಜನೆಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೩೦ (೩೭೬೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರಂಜಾ ಮುಲ್ಲಾಮಾರಿ ಹಾಗೂ ಚುಳಕೆ ನಾಲಾ ಯೋಜನೆಗಳಿಂದ ಬೀದರ್ ಜಿಲ್ಲೆಯ ಎಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರೆಯಲಿದೆ ;

(ಆ) ಕಾರಂಜಾ ಯೋಜನೆ ಸಂಪೂರ್ಣ ನೀರಾವರಿಗೆ ಮೀಸಲಾಗಿದೆಯೇ; ಅಥವಾ ಕುಡಿಯುವ ನೀರಿಗೂ ಬಳಕೆಯಾಗುತ್ತಿದೆಯೇ; ಕುಡಿಯುವ ನೀರಿನ ಬಳಕೆಯಾಗುತ್ತಿದ್ದರೆ, ಅದರಿಂದ ಎಷ್ಟು ಗ್ರಾಮಗಳಿಗೆ ನೀರು ಪೂರೈಸಲಾಗುತ್ತಿದೆ ;

(ಇ) ಜಿಲ್ಲೆಯಲ್ಲಿ ಯಾವ ಯಾವ ನೀರಾವರಿ ಯೋಜನೆಗಳು ಚಾಲ್ತಿಯಲ್ಲಿವೆ, ಅವುಗಳು ಯಾವ ಹಂತದಲ್ಲಿದೆ; ಈ ಯೋಜನೆಗಳ ಬಳಕೆಗೆ ಕೈಗೊಂಡ ಕ್ರಮಗಳೇನು ?

## ಬೀದರ್ ಜಿಲ್ಲೆಯ ಸಣ್ಣ ಕೆರೆಗಳ ಅಭಿವೃದ್ಧಿಯ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೩೧ (೩೭೬೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಸಣ್ಣ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬೀದರ್ ಜಿಲ್ಲೆಯಲ್ಲಿ ಸಣ್ಣ ಕೆರೆಗಳ ಅಭಿವೃದ್ಧಿಗೆ ೨೦೧೬–೧೭, ೨೦೧೭–೧೮ನೇ ಸಾಲಿನಲ್ಲಿ ಬಿಡುಗಡೆಯಾದ ಹಾಗೂ ಬಳಕೆಯಾದ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕಾಗಿ ಪ್ರಸ್ತಾವನೆ ಬಂದಿದೆಯೇ; ಬಂದಿದ್ದರೆ, ಹೊಸ ಕೆರೆಗಳನ್ನು ನಿರ್ಮಾಣ ಮಾಡದಿರಲು ಕಾರಣಗಳೇನು ; (ವಿವರ ನೀಡುವುದು)

(ಈ) ಬೀದರ್ ಜಿಲ್ಲೆ, ಔರಾದ್ ತಾಲ್ಲೂಕಿನ ತೇಗಂಪುರ ಏಕಂಬಾ, ಹಾಗೂ ಕೊರೆಕಲ್ ಕೆರೆಗಳಲ್ಲಿ ಕಲುಷಿತ ನೀರಿನಿಂದ ಸಾವಿರಾರು ಮೀನುಗಳು ಸಾವನ್ನಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು?

## ಸರ್ಕಾರಿ ಜಮೀನನ್ನು ಅರಣ್ಯ ಇಲಾಖೆಗೆ ನೀಡಿರುವ ಕುರಿತು

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೩೭ (೩೫೮೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಗೋವಮಾಳ/ಗುಂಡುತೋಪು ಇತ್ಯಾದಿಗಳಿಗೆ ನಿಗಧಿಪಡಿಸಿದ ಸರ್ಕಾರಿ ಜಮೀನನ್ನು ಸಾಮಾಜಿಕ ಅರಣ್ಯ ಇಲಾಖೆಗೆಂದು ಎಷ್ಟು ಎಕರೆ ನೀಡಲಾಗಿದೆ ;

(ಆ) ಅರಣ್ಯ ಇಲಾಖೆಗೆಂದು ನೀಡಿದ ಜಮೀನಿನಲ್ಲಿ ಸಾರ್ವಜನಿಕರು ಮನೆ ಕಟ್ಟಿಕೊಂಡಲ್ಲಿ ಅವರಿಗೆ ಸಕ್ರಮಾತಿ ಆದೇಶ ನೀಡದಿರಲು ಕಾರಣವೇನು;

(ಇ) ಸರ್ಕಾರವೇ ಅರಣ್ಯ ನಿರ್ವಹಣೆಗಾಗಿ ವಹಿಸಿದ ಜಮೀನನ್ನು ಹಿಂಪಡೆಯಲು ಸುಗ್ರೀವಾಜ್ಞೆ ಕಾಯ್ದೆಯ ಅಧಿಸೂಚನೆಯನ್ನು ಹೊರಡಿಸುವುದೇ;

(ಈ) ಅರಣ್ಯ ಇಲಾಖೆ ಬಳಸದೆ ಇರುವ ಜಮೀನನ್ನು ಹಿಂದಕ್ಕೆ ಪಡೆಯಲು ಕಾನೂನನ್ನು ರೂಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

## ಸಂಘ ಸಂಸ್ಥೆಗಳಿಗೆ ಸರ್ಕಾರಿ ಜಮೀನು ಮಂಜೂರಾತಿ ಕುರಿತು

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೩೩೩ (೩೫೭೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨೫ ವರ್ಷಗಳಿಂದ ವಿವಿಧ ಉದ್ದೇಶಗಳಿಗಾಗಿ ಸರ್ಕಾರದಿಂದ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಜಮೀನು ಎಷ್ಟು ;

(ಆ) ಯಾವ ಯಾವ ಸಂಘ ಸಂಸ್ಥೆಗಳಿಗೆ ಯಾವ ಯಾವ ದಿನಾಂಕಗಳಿಗೆ ಎಷ್ಟು ಎಕರೆ ಹಾಗೂ ಯಾವ ಬೆಲೆಗೆ (ದರ) ನಿಗಧಿಪಡಿಸಿ ಮಂಜೂರು ಮಾಡಲಾಗಿದೆಯೇ;

(ಇ) ಸರ್ಕಾರ ಮಂಜೂರು ಮಾಡಿರುವ ಜಮೀನಿನ ದರವನ್ನು ಪಾವತಿ ಮಾಡಲು ನಿಗಧಿಪಡಿಸಿದ ಕೊನೆಯ ದಿನಾಂಕ ಯಾವುದು;

(ಈ) ಹಾಗಿದ್ದಲ್ಲಿ, ಈ ಸಂಘ ಸಂಸ್ಥೆಗಳು ಹಣವನ್ನು ಪಾವತಿಸಿದ ದಿನಾಂಕಗಳು ಯಾವುದು ;

(ಉ) ಸರ್ಕಾರ ಮಂಜೂರು ಮಾಡಿದ ಈ ಜಮೀನುಗಳನ್ನು ಎಷ್ಟು ಸಂಸ್ಥೆಗಳು ಉದ್ದೇಶಿತ ಯೋಜನೆಗಳನ್ನು ಪೂರ್ಣಗೊಳಿಸಿದೆ; ಇನ್ನೂ ಪೂರ್ಣಗೊಳ್ಳದೆ ಇರುವ ಸಂಸ್ಥೆಗಳ ಹೆಸರು ವಿಳಾಸದ ಮಾಹಿತಿಯನ್ನು ಒದಗಿಸುವುದು;

(ಊ) ನಿಗಧಿಪಡಿಸಿದ ಕಾಲಾವಧಿಯಲ್ಲಿ ಶುಲ್ಕ ಕಟ್ಟದೆ ಇರುವ ಸಂಸ್ಥೆಗಳು ಯಾವುವು ; ಅವುಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

## ೨೦೧೭ನೇ ಸಾಲಿನಲ್ಲಿ ೧.೦೦ ಲಕ್ಷಗಳ ಮನೆ ನಿರ್ಮಾಣ ಕುರಿತು

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೩೪ (೩೫೨೨) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭ನೇ ಸಾಲಿನಲ್ಲಿ ಬಡವರಿಗಾಗಿ ಒಂದು ಲಕ್ಷ ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

(ಆ) ಹಾಗಿದ್ದಲ್ಲಿ, ಈ ಮನೆಗಳನ್ನು ಹಂಚಿಕೆ ಮಾಡಲು ರೂಪಿಸಿರುವ ನಿಯಮಾವಳಿಗಳೇನು;

(ಇ) ಈ ಯೋಜನೆಯಡಿಯಲ್ಲಿ ಫಲಾನುಭವಿಗಳು ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಆಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈಗಾಗಲೇ ವಿವಿಧ ಯೋಜನೆಗಳಲ್ಲಿ ವಸತಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಏಕೆ ಪರಿಗಣಿಸಬಾರದು ;

(ಉ) ಈ ಯೋಜನೆ ಯಾವಾಗಿನಿಂದ ಜಾರಿಗೆ ಬರಲಾಗುತ್ತದೆ; ಯಾವಾಗ ಪೂರ್ಣಗೊಳಿಸಲಾಗುವುದು ?

## ಕೆರೆಯ ಹೂಳೆತ್ತುವ ಕಾಮಗಾರಿಗೆ ನಿಗಧಿಪಡಿಸಿದ ಅನುದಾನದ ಬಗ್ಗೆ

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-**

೩೩೩೫ (೩೫೧೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಾಡುಕೊತ್ತನಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿಗೆ ಮಂಜೂರಾದ ಹಣ ಎಷ್ಟು ;

(ಆ) ಈ ಕೆರೆಯ ಕಾಮಗಾರಿಯನ್ನು ಪ್ರಾರಂಭಿಸಲು ಟೆಂಡರ್ ಕರೆದ ದಿನಾಂಕ ಯಾವುದು ; ಎಷ್ಟು ಮಂದಿ ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ ; ಟೆಂಡರ್ ಗುತ್ತಿಗೆದಾರರು ಯಾರು ;

(ಇ) ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ ; ಕಾಮಗಾರಿಗೆ ನಿಗಧಿಪಡಿಸಿರುವ ಆಳದ ಅಳತೆ ಎಷ್ಟು ; ಕೆರೆಯ ಏರಿಯನ್ನು ಎಷ್ಟು ಅಡಿಗಳಿಗೆ ಏರಿಸಲಾಗಿದೆ; ಎಷ್ಟು ವಿಸ್ತೀರ್ಣದ ಕಾಮಗಾರಿಯನ್ನು ವಹಿಸಲಾಗಿತ್ತು; ಪೂರ್ಣಗೊಂಡಿರುವ ವಿಸ್ತೀರ್ಣ ಎಷ್ಟು ;

(ಈ) ಈ ಕಾಮಗಾರಿಯ ಅಂದಾಜು ವೆಚ್ಚ ಮತ್ತು ಗುತ್ತಿಗೆದಾರರಿಗೆ ನೀಡಿರುವ ಬಿಲ್ಲುಗಳ ಪ್ರತಿ, ಕೆಲಸ ಪೂರ್ಣಗೊಂಡಿರುವ ಬಗ್ಗೆ ಪ್ರಮಾಣ ಪತ್ರ ನೀಡಿದವರು ಯಾರು ? (ಸಂಬಂಧಪಟ್ಟ ಪ್ರತಿಗಳನ್ನು ಹಾಗೂ ಕಾಮಗಾರಿಯ ಸಂಪೂರ್ಣ ಛಾಯಾ ಚಿತ್ರ ಫೋಟೋಗಳನ್ನು ನೀಡುವುದು)

## ರೈತರ ಜಮೀನಿನ ಹದ್ದುಬಸ್ತು ಮಾಡುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೩೩೩೬ (೩೫೨೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನಿಂದ ೨೦೧೭–೧೮ನೇ ಸಾಲಿನವರೆಗೆ ರೈತರ ಜಮೀನಿನ ಹದ್ದುಬಸ್ತು ಕೋರಿ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅರ್ಜಿದಾರರ ಹೆಸರು ಮತ್ತು ವಿಳಾಸ ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ನಿಗಧಿತ ಅವಧಿಯಲ್ಲಿ ಜಮೀನಿನ ಹದ್ದುಬಸ್ತು ಮಾಡದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಹದ್ದುಬಸ್ತು ಕಾರ್ಯವನ್ನು ಪೂರ್ಣಗೊಳಿಸಿ ರೈತರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು ;

(ಈ) ಜಮೀನಿನ ಹದ್ದುಬಸ್ತು ಕಾರ್ಯವು ಪೂರ್ಣವಾಗಿ ಸ್ಥಗಿತಗೊಳ್ಳಲು ಕಾರಣಗಳೇನು ;

(ಉ) ರೈತರ ಜಮೀನಿನ ಹದ್ದುಬಸ್ತು ಕಾರ್ಯವನ್ನು ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ?

## ಕಲಬುರಗಿ ಜಿಲ್ಲೆಯ ಹಸಿರು ಗ್ರಾಮ ಯೋಜನೆಯಡಿ ಕಾರ್ಯಕ್ರಮಗಳು

**ಶ್ರೀ ಇಕ್ಬಾಲ್ ಅಹಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು):–**

ಽ೩೩೩೭ (೩೭೧೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಿಂದ ಸರ್ಕಾರದ ವತಿಯಿಂದ ಘೋಷಿಸಿರುವ ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳೆಷ್ಟು; ಅವು ಯಾವುವು; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಈ ಯೋಜನೆಯಡಿ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು ;

(ಇ) ಈ ಯೋಜನೆಯಡಿ ಗ್ರಾಮವನ್ನು ಆಯ್ಕೆ ಮಾಡುವಾಗ ಅನುಸರಿಸಲಾಗುವ ಮಾನದಂಡಗಳೇನು ?

## ಬರಗಾಲದ ಬಗ್ಗೆ

**ಡಾ: ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೩೮ (೩೬೬೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ನಿರಂತರವಾಗಿ ಬರಗಾಲಕ್ಕೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಎರಡು ಜಿಲ್ಲೆಗಳ ಬರ ಪರಿಹಾರಕ್ಕಾಗಿ ಕಳೆದ ೩ ವರ್ಷಗಳಲ್ಲಿ ರಾಜ್ಯ ಸರ್ಕಾರ ನಿಗದಿಪಡಿಸಿ ನೀಡಿರುವ ಅನುದಾನವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಆ ಪೈಕಿ ಯಾವ ಯಾವ ಕಾಮಗಾರಿಗಳ ಕೈಗೆತ್ತಿಕೊಳ್ಳಲಾಗಿದೆ; (ಕಾಮಗಾರಿಗಳವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯ ಸರ್ಕಾರ ನೀಡಿದ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳಲ್ಲಿ ಇದುವರೆವಿಗೂ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು; (ಕಾಮಗಾರಿಗಳ ವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ರಾಜ್ಯ ಸರ್ಕಾರ ನೀಡಿದ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಅಪೂರ್ಣವಾಗಿರಲು ಕಾರಣಗಳೇನು ? (ವಿವರ ನೀಡುವುದು)

## ಕೊಳ್ಳೇಗಾಲ ಚಿಕ್ಕರಂಗನಾಥ ಕೆರೆಯ ಹೆಚ್ಚುವರಿ ನೀರು ಮಧ್ಯ ಕಾವೇರಿ ನೀರಿಗೆ ಸೇರುತ್ತಿರುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೩೪ (೩೫೧೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಳ್ಳೇಗಾಲ ಚಿಕ್ಕರಂಗನಾಥ ಕೆರೆಯ ಹೆಚ್ಚುವರಿ ನೀರು ಕೋಡಿ ಮತ್ತು ತೂಬಿನ ಮೂಲಕ ಸರ್ ಕಾಟನ್ ನಾಲೆಗೆ ಹರಿದು ಅಲ್ಲಿಂದ, ಕಾವೇರಿ ನದಿಯನ್ನು ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಚಿಕ್ಕರಂಗನಾಥ ಕೆರೆಯ ಹೆಚ್ಚುವರಿ ನೀರನ್ನು ಅಕ್ಕಪಕ್ಕದ ರೈತರ ಭೂಮಿಗೆ ಹರಿಸುವ ಮೂಲಕ ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಕ್ರಮ ಜರುಗಿಸಲಾಗುವುದೇ ?

## ಕೊಳ್ಳೇಗಾಲ ತಾಲ್ಲೂಕು ಜಾಗೇರಿ ಗ್ರಾಮದ ಭೂರಹಿತ ಜನರಿಗೆ ಜಮೀನು ಹಕ್ಕುಪತ್ರ ನೀಡಿಕೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೪೦ (೩೫೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಕೊಳ್ಳೇಗಾಲ ತಾಲ್ಲೂಕಿನ ಕಾಡಂಚಿನ ಗ್ರಾಮವಾದ ಜಾಗೇರಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರಿಗೆ ಸುಮಾರು ೨೮೯೪ ಎಕರೆಯ ಭೂಮಿಯನ್ನು ಹಂಚಿಕೆ ಮಾಡಿ ಜಮೀನು ಹಕ್ಕುಪತ್ರ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ;

(ಆ) ಕಳೆದ ೪೦ ವರ್ಷಗಳಿಂದ ಇಲ್ಲಿ ವಾಸಿಸುತ್ತಿದ್ದು ಕೃಷಿ ಮಾಡುತ್ತಿರುವ ಈ ರೈತರಿಗೆ ಆರ್.ಟಿ.ಸಿ ಪಡೆಯಲು ತೊಂದರೆಯಾಗಿರುವುದನ್ನು ಪರಿಹರಿಸಿ, ಅರಣ್ಯ ಇಲಾಖೆಯ ಅಡೆತಡೆಗಳನ್ನು ನಿವಾರಿಸಿ ಹಕ್ಕುಪತ್ರ ನೀಡಲು ಕ್ರಮ ಜರುಗಿಸಲಾಗುವುದೇ ?

## ಗುಂಡಾಲ್ ಜಲಾಶಯಕ್ಕೆ ಹೋಗುವ ರಸ್ತೆ ಹಾಗೂ ಜಲಾಶಯದ ಹಿಂದಿನ ಉದ್ಯಾನವನದ ಅಭಿವೃದ್ಧಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೪೧ (೩೫೧೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಗುಂಡಾಲ್ ಜಲಾಶಯ ಯಾವಾಗ ನಿರ್ಮಾಣವಾಯಿತು; ಇದರ ನೀರಿನ ಸಾಮರ್ಥ್ಯ ಎಷ್ಟು; ಈ ವರ್ಷ ಜಲಾಶಯ ಸಂಪೂರ್ಣವಾಗಿ ಭರ್ತಿಯಾಗಿರುತ್ತದೆಯೇ; ಇದರಿಂದ ನೀರಾವರಿಗೆ ಒಳಪಡುವ ಭೂಮಿಯ ವಿಸ್ತೀರ್ಣ ಎಷ್ಟು ;

(ಆ) ಕೊಳ್ಳೇಗಾಲ–ಹಾಸನೂರು ಘಾಟ್ ಹೆದ್ದಾರಿಯಿಂದ ಈ ಜಲಾಶಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಸಂಪೂರ್ಣ ಹದಗೆಟ್ಟಿದ್ದು, ಪ್ರವಾಸಿಗಳಿಗೆ ಮತ್ತು ಸಾರ್ವಜನಿಕರ ಸಂಚಾರಕ್ಕೆ ಅನಾನುಕೂಲ ಉಂಟಾಗಿರುವುದು ಗಮನಕ್ಕೆ ಬಂದಿದೆಯೇ; ಈ ರಸ್ತೆಯ ದುರಸ್ಥಿಗೆ ಕೂಡಲೇ ಕ್ರಮ ಜರುಗಿಸಲಾಗುವುದೇ ;

(ಇ) ಈ ಜಲಾಶಯದ ಹಿಂದೆ ಇರುವ ಉದ್ಯಾನವನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಯೋಜನೆ ಯಾವ ಹಂತದಲ್ಲಿದೆ ?

## ಕೆರೆ, ಹೊಂಡ, ತೊಟ್ಟಿಗಳಿಗೆ ನೀರು ಸಂಗ್ರಹಿಸುವ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೪೨ (೩೭೪೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಂತರ್ಜಲ ಹೆಚ್ಚಿಸುವ ಯೋಜನೆಯಡಿ ಕಳೆದ ಮೂರು ವರ್ಷಗಳಿಂದ ಇದುವರೆವಿಗೂ ಎಷ್ಟು ಚಿಕ್ಕ ಕೆರೆಗಳು ಹೊಂಡಗಳು ಹಾಗೂ ನೀರು ಸಂಗ್ರಹ ತೊಟ್ಟಿಗಳನ್ನು ನಿರ್ಮಿಸಲಾಗಿವೆ; (ವರ್ಷವಾರು, ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

(ಆ) ಈ ಕೆರೆ, ಹೊಂಡ ಹಾಗೂ ತೊಟ್ಟಿಗಳನ್ನು ತಾಲ್ಲೂಕುಗಳ ಯಾವ ಯಾವ ರೈತರ ಜಮೀನುಗಳಲ್ಲಿ ನಿರ್ಮಿಸಲಾಗಿದೆ; (ವರ್ಷವಾರು, ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

(ಇ) ಇವುಗಳ ನಿರ್ಮಾಣಕ್ಕೆ ತಗಲಿದ ವೆಚ್ಚವೆಷ್ಟು; (ಕಾಮಗಾರಿವಾರು ವಿವರ ನೀಡುವುದು)

(ಈ) ಸದರಿ ಕಾಮಗಾರಿಗಳಿಂದಾಗಿ ಒಟ್ಟು ಎಷ್ಟು ಪ್ರಮಾಣದ ನೀರು ಸಂಗ್ರಹವಾಗಲಿದೆ; ಇದರಿಂದ ಎಷ್ಟು ರೈತರುಗಳ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಲಭ್ಯವಾಗುವುದು ? (ತಾಲ್ಲೂಕುವಾರು ವಿವರ ನೀಡುವುದು)

## ನಿರ್ಮಿತಿ ಕೇಂದ್ರಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೪೩ (೩೬೬೩) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಯಾವ ಯಾವ ಕಾಮಗಾರಿಗಳಿಗೆ ಅನುಮೋದನೆ ದೊರಕಿದೆ; ಆ ಪೈಕಿ ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವುವು; ಪೂರ್ಣಗೊಂಡ ಕಾಮಗಾರಿಗಳಾವುವು ;

(ಆ) ಈ ಜಿಲ್ಲೆಗಳಲ್ಲಿನ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಆ ಪೈಕಿ ಬಳಕೆಯಾಗಿರುವ ಅನುದಾನ ಎಷ್ಟು ಬಳಕೆಯಾಗಿದೆ; (ಜಿಲ್ಲಾವಾರು ಕಾಮಗಾರಿವಾರು ಪೂರ್ಣ ಮಾಹಿತಿ ನೀಡುವುದು)

(ಇ) ಪೂರ್ಣಗೊಂಡ ಕಾಮಗಾರಿಗಳ ಗುತ್ತಿಗೆದಾರರಿಗೆ ಕಳೆದ ೩ ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ಕಾಮಗಾರಿವಾರು ವರ್ಷಾವಾರು ಹಾಗೂ ಜಿಲ್ಲಾವಾರು ಪೂರ್ಣ ವಿವರ ನೀಡುವುದು)

## ಕ್ರೀಡಾಂಗಣಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೪೪ (೩೬೬೭) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಪ್ರತಿಭಾವಂತ ಗ್ರಾಮೀಣ ಕ್ರೀಡಾಪಟುಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಅಧುನಿಕ ಅಥವಾ ಸುಸಜ್ಜಿತ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ ಮತ್ತು ಕ್ರೀಡಾ ವಸತಿ ನಿಲಯವನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

(ಆ) ಕೈಗೊಂಡಿಲ್ಲದಿದ್ದಲ್ಲಿ, ಕ್ರಮ ಕೈಗೊಳ್ಳಲಾಗುವುದು ಯಾವಾಗ; ಕೈಗೊಂಡಿದ್ದಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಜಿಲ್ಲೆಗಳಲ್ಲಿ ಯಾವುದಾದರು ಕ್ರೀಡಾಂಗಣದಲ್ಲಿರುವ ಟ್ರ್ಯಾಕ್‌ನ್ನು ಉನ್ನತೀಕರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಅವು ಯಾವುವು; (ವಿವರ ನೀಡುವುದು)

(ಈ) ಈ ಜಿಲ್ಲೆಗಳ ಕ್ರೀಡಾಂಗಣದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವುಗಳನ್ನು ಒದಗಿಸಲು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಅರಣ್ಯ ಇಲಾಖೆಯ ಕಚೇರಿಗಳು ಹಾಗೂ ಸಿಬ್ಬಂದಿಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೩೪೫ (೩೬೬೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಅರಣ್ಯ ಪ್ರದೇಶಗಳಾವುವು;

(ಆ) ಈ ಜಿಲ್ಲೆಗಳಲ್ಲಿ ಅರಣ್ಯ ಇಲಾಖೆಯ ಎಷ್ಟು ವಿಭಾಗಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ ಅವುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ/ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವೃಂದವಾರು ವಿವರ ನೀಡುವುದು)

(ಇ) ಈ ಜಿಲ್ಲೆಗಳಲ್ಲಿ ಸಾಮಾಜಿಕ ಅರಣ್ಯ ವಲಯಗಳು ಎಷ್ಟು ಹಾಗೂ ಎಲ್ಲೆಲ್ಲಿ ಇವೆ? (ತಾಲ್ಲೂಕುವಾರು ವಿವರ ನೀಡುವುದು)

## ಕೆ.ಎಫ್.ಡಿ.ಎಫ್–೦೩ ಯೋಜನೆ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೩೪೬ (೩೬೬೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ೨೦೧೭–೧೮ನೇ ಸಾಲಿನಲ್ಲಿ ಕೆ.ಎಫ್.ಡಿ.ಎಫ್–೦೩ ಯೋಜನೆಯ ಅಡಿಯಲ್ಲಿ ಕೈಗೊಂಡಿರುವ ನೆಡುತೋಪು ಕಾಮಗಾರಿಗಳು ಎಷ್ಟು; ಎಷ್ಟು ಹೆಕ್ಟೇರ್‌ನಲ್ಲಿ ಕೈಗೊಳ್ಳಲಾಗಿದೆ ; (ಮಾಹಿತಿ ನೀಡುವುದು)

(ಆ) ಈ ಜಿಲ್ಲೆಗಳಲ್ಲಿ ೨೦೧೬–೧೭ ಹಾಗೂ ೨೦೧೭–೧೮ನೇ ಸಾಲಿನಲ್ಲಿ ನೆಡುತೋಪು ಕಾಮಗಾರಿಗಳಿಗೆ ರಕ್ಷಣೆ ಮಾಡಲು ಇಲಾಖೆವತಿಯಿಂದ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಜಿಲ್ಲೆಗಳಲ್ಲಿ ೨೦೧೬-೧೭ ಹಾಗೂ ೨೦೧೭-೧೮ನೇ ಸಾಲಿನಲ್ಲಿ ನೆಡುತೋಪಿನ ನಿರ್ವಹಣೆ ಅಂದರೆ, ಮಣ್ಣಿನ ತೇವಾಂಶದ ಕೆಲಸ ಹಾಗೂ ಕಳೆ ತೆಗೆಯುವ ಕೆಲಸ ಮಾಡಲಾಗಿದೆಯೇ ಅಥವಾ ಇಲ್ಲವೇ; (ಸಂಪೂರ್ಣ ವಿವರ ನೀಡುವುದು)

(ಈ) ಅರಣ್ಯ ಇಲಾಖೆಯಲ್ಲಿ ನೋಂದಣಿ ಹೊಂದಿರುವ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ಅರಣ್ಯ ಗುತ್ತಿಗೆದಾರರ ಬಗ್ಗೆ ಸಂಪೂರ್ಣ ವಿವರ ನೀಡುವುದು?

**ಕೆ.ಆರ್.ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 0201/700 ಪ್ರತಿಗಳು/09-11-2017